ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಕಲಬುರಗಿ

ಹಾಗೂ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಾರ್ಯಾಲಯ, ಕಲಬುರಗಿ ವಿಭಾಗ, ಕಲಬುರಗಿ

ಉಪನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ, ರಾಯಚೂರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಯರಮರಸ್, ರಾಯಚೂರು.

# ಅಕ್ಷರ ಆವಿಷ್ಕಾರ

# ‘ಕಲಿಕಾಸರೆ’

## 2024-25

## ಪ್ರಥಮ ಭಾಷಾ ಸಿರಿ ಕನ್ನಡ

ಎಂಟನೆಯ ತರಗತಿಯ ವಿದ್ಯಾರ್ಥಿಗಳಸಾಮರ್ಥ್ಯಾಭಿವೃದ್ಧಿಗಾಗಿ ಅಭ್ಯಾಸ ಪುಸ್ತಕ

| | |
|---|---|
| ವಿದ್ಯಾರ್ಥಿಯ ಹೆಸರು : | |
| ಎಸ್.ಎ.ಟಿ.ಎಸ್. ಸಂಖ್ಯೆ : | ಹಾಜರಿ ಸಂಖ್ಯೆ : |
| ಶಾಲೆಯ ಹೆಸರು : | |

## ಪರಿಕಲ್ಪನೆ ಮತ್ತು ಆಯೋಜನೆ

**ಡಾ. ಆಕಾಶ ಎಸ್.** ಭಾ.ಆ.ಸೇ.

ಅಪರ ಆಯುಕ್ತರು,

ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ

**ಶ್ರೀಮತಿ ಮಮತಾ ನಾಯಕ**
ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ
ಕಲಬುರಗಿ ವಿಭಾಗ, ಕಲಬುರಗಿ

**ಶ್ರೀ ಎಚ್ ಸಿ. ಚಂದ್ರಶೇಖರ**
ಸಹ ನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ಕಲಬುರಗಿ ವಿಭಾಗ, ಕಲಬುರಗಿ

**ಶ್ರೀ ವಿಜಯಕುಮಾರ ಜಿ. ಎಂ**
ಸಹ ನಿರ್ದೇಶಕರು/ ಪ್ರಾಚಾರ್ಯರು
ಸರಕಾರಿ ಶಿಕ್ಷಕರ ಶಿಕ್ಷಣ
ಮಹಾವಿದ್ಯಾಲಯ(ಸಿಟಿಇ), ಕಲಬುರಗಿ

**ಶ್ರೀ ಚನ್ನಬಸಪ್ಪ ಮುದೋಳ**
ಪ್ರಭಾರಿ ಉಪನಿರ್ದೇಶಕರು (ಯೋಜನೆ)
ಶಾಲಾ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಕಲಬುರಗಿ

**ಶ್ರೀ ಯುವರಾಜ ಗಾಡಿ**
ಹಿರಿಯ ಸಹಾಯಕ ನಿರ್ದೇಶಕರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ
ವಿಭಾಗ, ಕಲಬುರಗಿ

**ಶ್ರೀ ನಾಗೇಂದ್ರಪ್ಪ ಅವರಾದ**
ವಿಷಯ ಪರಿವೀಕ್ಷಕರು
ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,
ಕಲಬುರಗಿ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀ ಶ್ರೀನಿವಾಸ ರೆಡ್ಡಿ** ಕೆ.ಇ.ಎಸ್.
ಪ್ರಾಚಾರ್ಯರು
ಡಯಟ್ ಯರಮರಸ್, ರಾಯಚೂರು

**ಶ್ರೀ ಮಲ್ಲಿಕಾರ್ಜುನ.ಜಿ** ಕೆ.ಇ.ಎಸ್.
ಹಿರಿಯ ಉಪನ್ಯಾಸಕರು
ಡಯಟ್ ಯರಮರಸ್, ರಾಯಚೂರು

## ವಿಭಾಗೀಯ ನೋಡಲ್ ಅಧಿಕಾರಿಗಳು

**ಶ್ರೀ ರಾಚಪ್ಪ ಭದ್ರಶೆಟ್ಟಿ**
ಉಪನ್ಯಾಸಕರು
ಸರಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿಟಿಇ), ಕಲಬುರಗಿ

## 8ನೇ ತರಗತಿ 'ಕಲಿಕಾಸರೆ'ಯ ಕಲಬುರಗಿ ವಿಭಾಗೀಯ ಪರಿಶೀಲನಾ ಸಮಿತಿ ಸದಸ್ಯರು


**ಡಾ.ಡಿ.ಎನ್.ಪಾಟೀಲ,**
ಸಹ ಶಿಕ್ಷಕರು
ಸರಕಾರಿ ಪ್ರೌಢ ಶಾಲೆ ನೆಲ್ಲೂರ
ತಾ:ಆಳಂದ ಜಿ:ಕಲಬುರಗಿ

**ಶ್ರೀ ಬಸಯ್ಯಸ್ವಾಮಿ,**
ಸಹ ಶಿಕ್ಷಕರು
ಸರಕಾರಿ ಪ್ರೌಢ ಶಾಲೆ ಕಕ್ಕೇರಾ
ತಾ:ಸುರಪೂರ ಜಿ:ಯಾದಗಿರಿ

**ಶ್ರೀ ಚಂದ್ರಶೇಖರ ಕುಂಬಾರ,**
ಸಹಶಿಕ್ಷಕರು
ಸರಕಾರಿ ಪ್ರೌಢ ಶಾಲೆ ಕೋಗನೂರು
ತಾ:ಅಫಜಲಪೂರ ಜಿ:ಕಲಬುರುಗಿ


## ಸಂಪನ್ಮೂಲ ಸಾಹಿತ್ಯ ರಚನಾ ತಂಡ

- ಶ್ರೀ ಪೀರ್ ಮಹಮ್ಮದ್ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಸಿಂಗನೋಡಿ ತಾ॥ ರಾಯಚೂರು.
- ಶ್ರೀ ಶಂಕರಗೌಡ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ (ಬಾಲಕಿಯರ) ಮುದಗಲ್ ತಾ॥ ಲಿಂಗಸುಗೂರು.
- ಶ್ರೀ ಬಸವರಾಜ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಅಂಬಾಮಠ ತಾ॥ ಸಿಂಧನೂರು.
- ಶ್ರೀ ನಿಂಗಪ್ಪ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಪೋಲಿಸ್ ಕಾಲೋನಿ,ರಾಯಚೂರು
- ಶ್ರೀ ಅಮರೇಶ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ (ಬಾಲಕಿಯರ) ರಾಯಚೂರು.
- ಶ್ರೀಮತಿ ನಿರ್ಮಲ ಭಂಡಾರಿ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ.ಅಸ್ಕಿಹಾಳ, ರಾಯಚೂರು.
- ಶ್ರೀ ದೇವಪ್ಪ ಕನ್ನಡ ಪಂಡಿತರು. ಕರ್ನಾಟಕ ಪಬ್ಲಿಕ್ ಶಾಲೆ ಮಸ್ಕಿ ತಾ॥ ಮಸ್ಕಿ.
- ಶ್ರೀ ಇಸ್ಮಾಯಿಲ್ ಪಿ ತಳಕಲ್ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಮಾಡಗಿರಿ ತಾ॥ ಸಿರವಾರ.
- ಶ್ರೀಮತಿ ರೇವಮ್ಮ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಹೇಮನೂರು ತಾ॥ ದೇವದುರ್ಗ.
- ಶ್ರೀಮತಿ ನಾಗರತ್ನ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ.(ಬಾಲಕಿಯರ) ಮುನ್ನೂರುವಾಡಿ, ರಾಯಚೂರು.
- ಶ್ರೀಮತಿ ಮಂಜುಳಾ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ.(ಬಾಲಕಿಯರ) ಸಿರವಾರ ತಾ॥ ಸಿರವಾರ.
- ಶ್ರೀಮತಿ ಲಕ್ಷ್ಮಿ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ (ಬಾಲಕರ) ಸಿರವಾರ ತಾ॥ ಸಿರವಾರ.
- ಶ್ರೀಮತಿ ಡಾ.ಭಾಗ್ಯಶ್ರೀ ಪಾಟೀಲ್ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಡಿ.ಯದ್ಲಾಪುರ ತಾ॥ ರಾಯಚೂರು.
- ಶ್ರೀಮತಿ ಗಂಗಾಬಾಯಿ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ (ಬಾಲಕರ) ರಾಯಚೂರು.
- ಶ್ರೀ ಶಿವಣ್ಣ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಚಿಂಚೋಡಿ ತಾ॥ ರಾಯಚೂರು.
- ಶ್ರೀ ಮಂಜುನಾಥ ಎ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ವಡವಾಟಿ. ತಾ॥ ರಾಯಚೂರು.
- ಶ್ರೀ ವಸಂತ ಕುಮಾರ್ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಮಡ್ಡಿಪೇಟೆ, ರಾಯಚೂರು.
- ಶ್ರೀ ರಾಮರೆಡ್ಡಿ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಒಳಬಳ್ಳಾರಿ ತಾ॥ ಸಿಂಧನೂರು.
- ಶ್ರೀ ದ್ಯಾವಪ್ಪ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಮದ್ಲಾಪೂರು ತಾ॥ ಮಾನವಿ.
- ಶ್ರೀ ಗೂಳಪ್ಪ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಮರಕಂದಿನ್ನಿ ತಾ॥ ಮಸ್ಕಿ
- ಶ್ರೀ ಮಹೆಬೂಬ ಪಾಷಾ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ (ಬಾಲಕರ) ಮಾನವಿ ತಾ॥ ಮಾನವಿ.
- ಶ್ರೀ ಮಹಾಂತೇಶ. ಬಿ. ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಹೆಡಗಿನಾಳ ತಾ॥ ಸಿಂಧನೂರು.
- ಶ್ರೀ ಮಂಜುನಾಥ ಪೂಜಾರಿ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ. ಚಿತಾಪೂರು ತಾ॥ ಲಿಂಗಸುಗೂರು.
- ಶ್ರೀ ನಟರಾಜ್ ಕನ್ನಡ ಪಂಡಿತರು ಸರಕಾರಿ ಪ್ರೌಢಶಾಲೆ ಮಟ್ಟೂರು ತಾ॥ ಲಿಂಗಸುಗೂರು.

## ಭಾಗ – ೧

## ಪರಿವಿಡಿ

| ಕ್ರ.ಸಂ. | ಆಯ್ದುಕೊಂಡ ಘಟಕಗಳು | ನಿರೀಕ್ಷಿತ ಅಂಕ | ನಿಗದಿತ ಅಭ್ಯಾಸದ ಅವಧಿ | ಪುಟ ಸಂಖ್ಯೆ |
|---|---|---|---|---|
| ೦೦ | ಬುನಾದಿ ಸಾಮರ್ಥ್ಯ– ವರ್ಣಮಾಲೆ | ೩–೪ | ೬೦.ನಿಮಿಷ | ೦೧ |
| ೦೧ | ಗದ್ಯ –೧ ಮಗ್ಗದ ಸಾಹೇಬ | ೩–೪ | ೬೦.ನಿಮಿಷ | |
| ೦೨ | ಪದ್ಯ –೧ ಕನ್ನಡಿಗರ ತಾಯಿ | ೪–೫ | ೬೦. ನಿಮಿಷ | |
| ೦೩ | ಪ.ಪೂ.–೧ ಸಾರ್ಥಕ | ೧–೨ | ೩೦.ನಿಮಿಷ | |
| ೦೪ | ಗದ್ಯ –೨ ಸಾರ್ಥಕ ಬದುಕಿನ ಸಾಧಕ –ಡಿ.ವಿ.ಜಿ. | ೩–೪ | ೬೦.ನಿಮಿಷ | |
| ೦೫ | ಪದ್ಯ –೨ ಭಾರತೀಯತೆ | ೪–೫ | ೬೦.ನಿಮಿಷ | |
| ೦೬ | ಪ.ಪೂ. –೨ ಆಹುತಿ | ೧–೨ | ೩೦.ನಿಮಿಷ | |
| ೦೭ | ಗದ್ಯ –೩ ನೀರು ಕೊಡದ ನಾಡಿನಲ್ಲಿ | ೩–೪ | ೬೦.ನಿಮಿಷ | |
| ೦೮ | ಪದ್ಯ –೩ ಬೇವು ಬೆಲ್ಲದೊಳಿಡಲೇನು ಫಲ | ೪–೫ | ೬೦.ನಿಮಿಷ | |
| ೦೯ | ಪ.ಪೂ. –೩ ಮಗಳಿಗೆ ಬರೆದ ಪತ್ರ | ೧–೨ | ೩೦.ನಿಮಿಷ | |
| ೧೦ | ಗದ್ಯ –೪ ಯಶೋಧರೆ | ೩–೪ | ೬೦.ನಿಮಿಷ | |
| ೧೧ | ಪದ್ಯ –೪ ಸೋಮೇಶ್ವರ ಶತಕ | ೪–೫ | ೬೦.ನಿಮಿಷ | |
| ೧೨ | ಪತ್ರಲೇಖನ | ೧–೫ | ೬೦.ನಿಮಿಷ | |
| ೧೩ | ಗಾದೆ ವಿಸ್ತರಣೆ | ೧–೩ | ೩೦.ನಿಮಿಷ | |
| ೧೪ | ಕೃತಿಕಾರರ ಪರಿಚಯ | ೧–೩ | ೩೦.ನಿಮಿಷ | |
| ೧೫ | ಅಲಂಕಾರ | ೧–೩ | ೬೦.ನಿಮಿಷ | |
| ೧೬ | ಸಂಕಲನಾತ್ಮಕ ಮೌಲ್ಯಾಂಕನ –೧ ಪ್ರಶ್ನೋತ್ತರ ಪತ್ರಿಕೆ | ೪೦ | ೯೦.ನಿಮಿಷ | |

# ಬುನಾದಿ ಸಾಮರ್ಥ್ಯ– ವರ್ಣಮಾಲೆ

| | | | | | | | | | | | | |
|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ |
| ಅಂ | ಅಃ | | | | | | | | | | | |
| ಕ | ಖ | ಗ | ಘ | ಙ | | | | | | | | |
| ಚ | ಛ | ಜ | ಝ | ಞ | | | | | | | | |
| ಟ | ಠ | ಡ | ಢ | ಣ | | | | | | | | |
| ತ | ಥ | ದ | ಧ | ನ | | | | | | | | |
| ಪ | ಫ | ಬ | ಭ | ಮ | | | | | | | | |
| ಯ | ರ | ಲ | ವ | ಶ | ಷ | ಸ | ಹ | ಳ | | | | |

## ಬಿಟ್ಟ ಸ್ಥಳಗಳನ್ನು ತುಂಬಿರಿ.

| | | | | | | | | | | | | |
|---|---|---|---|---|---|---|---|---|---|---|---|---|
| ಅ | | ಇ | | ಉ | | ಋ | ಎ | | | ಒ | | |

| | | | | | | | | | | | | |
|---|---|---|---|---|---|---|---|---|---|---|---|---|
| | ಆ | | ಈ | | ಊ | | | ಏ | ಐ | | ಓ | ಔ |

| | |
|---|---|
| ಅಂ | ಅಃ |

| | | | | |
|---|---|---|---|---|
| ಕ | | ಗ | | ಙ |
| ಚ | | ಜ | | ಞ |
| ಟ | | ಡ | | ಣ |

| | | | | | | | | |
|---|---|---|---|---|---|---|---|---|
| ತ | | ದ | | ನ | | | | |
| ಪ | | ಬ | | ಮ | | | | |
| | ರ | | ವ | | ಷ | | ಹ | |

| | | | | | | | | | | |
|---|---|---|---|---|---|---|---|---|---|---|
| ಕ | | ಗ | | ಙ | | ಕ | | | | ಙ |
| ಚ | | ಜ | | ಞ | | | | | | |
| ಟ | | ಡ | | ಣ | | | | | | |
| ತ | | ದ | | ನ | | | | | | |
| ಪ | | ಬ | | ಮ | | ಪ | | | | ಮ |

| | | | | | | | | |
|---|---|---|---|---|---|---|---|---|
| ಯ | | ಲ | | ಶ | | ಸ | | ಳ |
| | | | | | | | | |

| | | | | | | | | | | |
|---|---|---|---|---|---|---|---|---|---|---|
| | ಖ | | ಘ | | | | ಖ | ಗ | ಘ | |
| | ಛ | | ಝ | | | | ಛ | ಜ | ಝ | |
| | ಠ | | ಢ | | | | ಠ | ಡ | ಢ | |
| | ಥ | | ಧ | | | | ಥ | ದ | ಧ | |
| | ಫ | | ಭ | | | | ಫ | ಬ | ಭ | |

| | | | | | | | | |
|---|---|---|---|---|---|---|---|---|
| ಯ | | | | | | | | ಳ |
| | ರ | | ವ | | | ಸ | ಹ | |
| | | | | | | | | |

| | | | | | | | | |
|---|---|---|---|---|---|---|---|---|
| ಕ | | | | | | | | |
| ಚ | | | | | | | | |
| ಟ | | | | | | | | |
| ತ | | | | | | | | |
| ಪ | | | | | | | | |
| ಯ | | | | | | | | |

ವರ್ಣಮಾಲೆಯ ಅಕ್ಷರಗಳಿಂದ ಸರಳ ಪದಗಳನ್ನು ಉದಾಹರಣೆಯಂತೆ ರಚಿಸಿ

| | | | | | | | | | | | | |
|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ |
| ಅಂ | ಅಃ | | | | | | | | | | | |
| ಕ | ಖ | ಗ | ಘ | ಙ | | | | | | | | |
| ಚ | ಛ | ಜ | ಝ | ಞ | | | | | | | | |
| ಟ | ಠ | ಡ | ಢ | ಣ | | | | | | | | |
| ತ | ಥ | ದ | ಧ | ನ | | | | | | | | |
| ಪ | ಫ | ಬ | ಭ | ಮ | | | | | | | | |
| ಯ | ರ | ಲ | ವ | ಶ | ಷ | ಸ | ಹ | ಳ | | | | |

ಉದಾಹರಣೆ :–

| | | | | | | | | | | |
|---|---|---|---|---|---|---|---|---|---|---|
| ಸ | ರ | | ಕ | ದ | ನ | | ಗ | ರ | ಗ | ಸ |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |

## ಸಂಯುಕ್ತಾಕ್ಷರಗಳು

**ಸಂಯುಕ್ತಾಕ್ಷರ / ಒತ್ತಕ್ಷರಗಳನ್ನು ಗುರ್ತಿಸಿ ಬರೆಯಿರಿ. (ಬಿಟ್ಟಿರುವ ಒತ್ತಕ್ಷರಗಳನ್ನು ಶಿಕ್ಷಕರ ಸಹಾಯದಿಂದ ಬರೆಯಿರಿ)**

| | | | | | | | | |
|---|---|---|---|---|---|---|---|---|
| ಕ್ಕ | ಖ್ಖ | ಗ್ಗ | ಘ | ಙ್ಙ | | | | |
| ಚ್ಚ | ಛ | ಜ್ಜ | ಝ್ಝ | ಞ್ಞ | | | | |
| ಟ | ಠ್ಠ | ಡ್ಡ | ಢ್ಢ | ಣ್ಣ | | | | |
| ತ್ತ | ಥ್ಥ | ದ್ದ | ಧ್ಧ | ನ್ನ | | | | |
| ಪ್ಪ | ಫ್ಫ | ಬ್ಬ | ಭ್ಭ | ಮ್ಮ | | | | |
| ಯ್ಯ | ರ್ರ | ಲ್ಲ | ವ್ವ | ಶ್ಶ | ಷ್ಷ | ಸ್ಸ | ಹ್ಹ | ಳ್ಳ |

**ಈ ಕೆಳಗಿನ ಅಕ್ಷರಗಳಿಗೆ ಒತ್ತಕ್ಷರಗಳನ್ನು ಬರೆಯಿರಿ.**

| | | | | | | | | |
|---|---|---|---|---|---|---|---|---|
| ಕ | ಖ | ಗ | ಘ | ಙ | | | | |
| ಚ | ಛ | ಜ | ಝ | ಞ | | | | |
| ಟ | ಠ | ಡ | ಢ | ಣ | | | | |
| ತ | ಥ | ದ | ಧ | ನ | | | | |
| ಪ | ಫ | ಬ | ಭ | ಮ | | | | |
| ಯ | ರ | ಲ | ವ | ಶ | ಷ | ಸ | ಹ | ಳ |

### ಸಂಯುಕ್ತಾಕ್ಷರಗಳಲ್ಲಿ ಎರಡು ವಿಧ

೧. ಸಜಾತೀಯ ಸಂಯುಕ್ತಾಕ್ಷರ　　　　೨. ವಿಜಾತೀಯ ಸಂಯುಕ್ತಾಕ್ಷರ

### ಸಜಾತೀಯ ಸಂಯುಕ್ತಾಕ್ಷರಗಳು

ಒಂದು ವ್ಯಂಜನದ ಮುಂದೆ ಅದೇ ವ್ಯಂಜನಾಕ್ಷರ ಬಂದರೆ ಅದನ್ನು ಸಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.

| | |
|---|---|
| ಅಪ್ಪ = ಅ+ಪ್+ಪ್+ಅ | ಸುದ್ದಿ = ಸ್+ಉ+ದ್+ದ್+ಇ |
| ಸೊಕ್ಕು = ಸ್+ಒ+ಕ್+ಕ್+ಉ | ಕಗ್ಗ = ಕ್+ಅ+ಗ್+ಗ್+ಅ |

## ವಿಜಾತೀಯ ಸಂಯುಕ್ತಾಕ್ಷರಗಳು

ಒಂದು ವ್ಯಂಜನದ ಮುಂದೆ ಬೇರೆ ವ್ಯಂಜನಾಕ್ಷರ ಬಂದರೆ ಅದನ್ನು ವಿಜಾತೀಯ ಸಂಯುಕ್ತಾಕ್ಷರ ಎನ್ನುತ್ತಾರೆ.

| | |
|---|---|
| ವಕ್ರ = ವ್+ಅ+ಕ್+ರ್+ಅ | ಕೃಷ್ಣ = ಕ್+ಋ+ಷ್+ಣ್+ಅ |
| ಅಬ್ದಿ = ಅ+ಬ್+ದ್+ಇ | ಅಕ್ಷರ = ಅ+ಕ್+ಷ್+ಅ+ರ್+ಅ |

**ಈ ಕೆಳಗಿನ ಅಕ್ಷರಗಳನ್ನು ಬಳಸಿ ಪದಗಳನ್ನು ಬರೆಯಿರಿ.**

| | | | | | |
|---|---|---|---|---|---|
| ಅ | ಕ್ಕ | ರೆ | | ೧ | ಅಕ್ಕರೆ |
| ಚ | | ಡಿ | | ೨ | |
| ಸ | | ರೆ | | ೩ | |
| ಮ | | ಳು | | ೪ | |
| ಇ | | ಳ | | ೫ | ಇಕ್ಕಳ |
| ಕು | | ರ | | ೬ | |
| ಕೊ | | ರೆ | | ೭ | |
| ತ | | ಡಿ | | ೮ | |
| ಬೊ | | ಸ | | ೯ | ಬೊಕ್ಕಸ |
| ಮೆ | | ಲು | | ೧೦ | |
| ರ | | ಸ | | ೧೧ | |
| ಹೊ | | ಳು | | ೧೨ | |

- **ವಿಜಾತೀಯ ಸಂಯುಕ್ತಾಕ್ಷರಗಳನ್ನು ಓದಲು ಬರೆಯಲು ಪ್ರಯತ್ನಿಸಿ.**

| | | | |
|---|---|---|---|
| ಕಸ್ತೂರಿ | ವಿಶ್ವಾಸ | ಸನ್ಮಾನ | ಅಕ್ರಮ |
| ಚಂದ್ರ | ಶ್ರಾವಣಿ | ನಿರ್ಮಾಣ | ತತ್ವ |
| ಪ್ರಯತ್ನ | ಸಕ್ಷಮ | ವಿಜ್ಞಾನ | ಪಥ್ಯ |
| ಕರ್ಮ | ವಿಶ್ವಾಸ | ಸನ್ಮಾನ | ಅಕ್ರಮ |

ನಿಮ್ಮ ಪುಸ್ತಕದಲ್ಲಿರುವ ಸಂಯುಕ್ತಾಕ್ಷರಗಳನ್ನು ಬರೆಯಲು ಪ್ರಯತ್ನಿಸಿ.

| ಸಜಾತೀಯ ಸಂಯುಕ್ತಾಕ್ಷರಗಳು | | ವಿಜಾತೀಯ ಸಂಯುಕ್ತಾಕ್ಷರಗಳು | |
|---|---|---|---|
| ೧ | ೯ | ೧ | ೯ |
| ೨ | ೧೦ | ೨ | ೧೦ |
| ೩ | ೧೧ | ೩ | ೧೧ |
| ೪ | ೧೨ | ೪ | ೧೨ |
| ೫ | ೧೩ | ೫ | ೧೩ |
| ೬ | ೧೪ | ೬ | ೧೪ |
| ೭ | ೧೫ | ೭ | ೧೫ |
| ೮ | ೧೬ | ೮ | ೧೬ |

## ಘಟಕ ಪರೀಕ್ಷೆ

## ಬುನಾದಿ ಸಾಮರ್ಥ್ಯ– ವರ್ಣಮಾಲೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಒಂದು ವ್ಯಂಜನಾಕ್ಷರಕ್ಕೆ ಒಂದು ಸ್ವರಾಕ್ಷರ ಸೇರಿ ಉಂಟಾಗುವ ಅಕ್ಷರಕ್ಕೆ ಏನೆನ್ನುತ್ತಾರೆ?

ಉತ್ತರ : ------------------------------------------------------------------

೨. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.

| | | | | | | | |
|---|---|---|---|---|---|---|---|
| ಹ್ರಸ್ವಸ್ವರ | | | | | | | |
| ದೀರ್ಘಸ್ವರ | | | | | | | |

೩. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.

| | | | | | | | | | |
|---|---|---|---|---|---|---|---|---|---|
| | | | | | | | | | |

೪. ವಿಜಾತೀಯ ಸಂಯುಕ್ತಾಕ್ಷರ ಎಂದರೇನು?

ಉತ್ತರ : ------------------------------------------------------------------

------------------------------------------------------------------------

೫. 'ಕಸ್ತೂರಿ' ಪದದಲ್ಲಿರುವ ಮೂಲಾಕ್ಷರಗಳನ್ನು ಬಿಡಿಸಿ ಬರೆಯಿರಿ.

ಉತ್ತರ : ------------------------------------------------------------------

೬. ಕೊಟ್ಟಿರುವ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.

| ಅವು | ಷಟ್ | ಆನೆ | ಉಂಡೆ | ಈಶ | ಚಿತ್ | ಊಟ | ರಾಜ್ | ಋಷಿ | ಏಣಿ |
|---|---|---|---|---|---|---|---|---|---|
| ವು | ಷ | | | | | | | | |

೭. ಗ್ಗ ಒತ್ತಕ್ಷರ ಹೊಂದಿರುವ ಪದಗಳನ್ನು ಬರೆಯಿರಿ.

| | | | | |
|---|---|---|---|---|
| | | | | |

೮. ಕೊಟ್ಟಿರುವ ಗುಣಿತಾಕ್ಷರಗಳಿಂದ ಅರ್ಥಪೂರ್ಣ ಪದಗಳನ್ನು ಬರೆಯಿರಿ.

| | | | | |
|---|---|---|---|---|
| ಅ | ಬ | ಭ | ನ | ವಿ |
| ತ | ರ | ಭಾ | ಯ | ಮ |
| ಬ | ಸ | ಮ | ನೆ | ತ |
| ಲ | ಕಾ | ಲು | ನೆ | ಲೆ |
| ಶಾ | ಬಂ | ಯ | ಹ | ಸಾ |
| ಕೊ | ಲೆ | ಗಾ | ಕ | ಹೇ |
| ಳ | ಲು | ಆ | ರ | ಬ |
| ರ | ಹೀ | ಮ | ಟ | ಳೆ |

| | | |
|---|---|---|
| ಉದಾ: ಭಾರತ | | |
| ಭಯ | | |
| | | |
| | | |
| | | |
| | | |
| | | |
| | | |

****

# ಗದ್ಯಪಾಠ–೧ ಮಗ್ಗದ ಸಾಹೇಬ

## –ಬಾಗಲೋಡಿ ದೇವರಾಯ



## ಕೃತಿಕಾರರ ಪರಿಚಯ

ಬಾಗಲೋಡಿ ದೇವರಾಯ ಅವರು ಸಾ.ಶ. ೧೯೨೭ ರಲ್ಲಿ **ದಕ್ಷಿಣ ಕನ್ನಡ ಜಿಲ್ಲೆಯ ಬಾಗಲೋಡಿ**ಯಲ್ಲಿ ಜನಿಸಿದರು. ಇವರು **ಹುಚ್ಚು ಮುನಸೀಫ ಮತ್ತು ಇತರ ಕತೆಗಳು, ಆರಾಧನಾ, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು** ಮುಂತಾದ ಕಥಾ ಸಂಗ್ರಹಗಳನ್ನು ರಚಿಸಿದ್ದಾರೆ. ಬಾಗಲೋಡಿ ದೇವರಾಯ ಅವರು ಒಟ್ಟು ೨೬ ಕತೆಗಳನ್ನು ಬರೆದಿದ್ದಾರೆ.

**ಚಟುವಟಿಕೆ–೧**

- ಪ್ರಮುಖ ಅಂಶಗಳನ್ನು ಗುರುತಿಸುವುದು.

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |
| |
| |
| |

- **ಪಾಠದ ಪ್ರಮುಖಾಂಶಗಳು**

೧. ಅಬ್ದುಲ್ ರಹೀಮ್ ಸಾಹೇಬನನ್ನು ಮಗ್ಗದ ಸಾಹೇಬನೆಂದೇ ಕರೆಯುತ್ತಿದ್ದರು. ಅವರ ಪೂರ್ವಜರು ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರಿಂದ ಮಸೀದಿ ಮಾತ್ರವಲ್ಲ ದೇವಸ್ಥಾನವನ್ನೂ ಕಟ್ಟಿಸಿದ್ದರು.

೨. ಉರ್ಸ್ ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದಲ್ಲಿ ಲೇಖಕರ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯವಿತ್ತು.

೩. ರಾಯರೇ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೇ? ಮನೆಯಲ್ಲಿ ಕಾಯಿಲೆ ಇದ್ದರೆ ತುಂಡು ಬೆಲ್ಲವನ್ನೋ ಕಲ್ಲು ಸಕ್ಕರೆ ಹರಳನ್ನೋ ಕೊಡಿ.

೪. ಜನರಿಗೆ ಬೇಕಾದುದು ಬ್ರಿಟಿಷರು ತಯಾರಿಸಿದ ಅಗ್ಗದ ವಸ್ತುಗಳು.  ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು

೫. ಅಬ್ದುಲ್ ರಹೀಮನ  ಮೊದಲ ಎರಡು ಮಕ್ಕಳು ಸರಕಾರಿ ನೌಕರರಾಗಿ ಅವನ ಆಸೆಯನ್ನು ನೆರವೇರಿಸಿದರು. ಆದರೆ ಕೊನೆಯ ಮಗ ಕರಿಮನಿಂದ ನಿರಾಸೆ ಉಂಟಾಯಿತು.

೬. ಮಹಾತ್ಮ ಗಾಂಧಿ ಪ್ರೇರಣೆಯಿಂದ ಶಾಲೆಯಲ್ಲಿ ನವೀನ ಶಿಕ್ಷಣ ಆರಂಭವಾಯಿತು. ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತ. ಮಗ್ಗದಲ್ಲಿ ಪರಿವರ್ತನೆ ಮಾಡಿದ ಕರಿಮನಿಗೆ ಒಂದು ಬೆಳ್ಳಿಯ ಪದಕ ಒಂದು ನೂರು ರೂಪಾಯಿಯ ಬಹುಮಾನ ಬಂದಿತು.

೭. ಹಳೆಯ ವಿದ್ಯರ್ಥಿಗಳ ವರ್ಷಿಕೋತ್ಸವ ಸಮಾರಂಭಕ್ಕಾಗಿ ತಾಯಿಯಿಂದ ಚಿನ್ನದ ಸರವನ್ನು ತೆಗೆದುಕೊಂಡು ನಾಪತ್ತೆಯಾದ. ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ."

೮. ಕರೀಮ್ ಸಣ್ಣಪ್ರಾಯದಲ್ಲಿ ಮಗ್ಗದ ಸಹಕಾರಿ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷನಾಗಿ ಧನವಂತ ವ್ಯಕ್ತಿಯಾಗಿದ್ದ.

೯. ಕರೀಮನಿಗೆ ರಾಷ್ಟ್ರಪತಿಯವರು ಪದ್ಮಭೂಷಣ ಬಿರುದನ್ನು ಕೊಟ್ಟರು.

೧೦.ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕರ್ತಿ ತಂದ" ಎಂದು ಭಾವುಕನಾದ ಕರಿಮನ ತಂದೆ.

**ಚಟುವಟಿಕೆ–೨ : ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.**

**ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು**

**೧. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?**

ಉತ್ತರ : ರಹೀಮ ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿತ್ತು.

**೨. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?**

ಉತ್ತರ : ರಥೋತ್ಸವದ ಸಮಯದಲ್ಲಿ ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದ ಪಡೆಯುವ ಹಕ್ಕಿತ್ತು.

**೩. ಅಬ್ದುಲ್ ರಹೀಮನ ಹಠವೇನು?**

ಉತ್ತರ : ತನ್ನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂಬುದು ಅಬ್ದುಲ್ ರಹೀಮನ ಹಠವಾಗಿತ್ತು.

**೪. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?**

ಉತ್ತರ : ಒಬ್ಬ ಸರಕಾರಿ ಕಛೇರಿಯಲ್ಲಿ ಗುಮಾಸ್ತನಾದ,, ಮತ್ತೊಬ್ಬ ಪೋಸ್ಟ್‌ಮಾಸ್ತರನಾದ. ಹೀಗೆ ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದರು.

**೫. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?**

ಉತ್ತರ : ರಹೀಮ ಮಗ್ಗದ ಹುಚ್ಚನ್ನು ಬಿಡಿಸಲು ಮಗನನ್ನು ಶಾಲೆಯಿಂದ ಬಿಡಿಸಿದನು.

- **ಈ ಗದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು**

**ಆಯ್ಕೆ:** ಈ ವಾಕ್ಯವನ್ನು **ಬಾಗಲೋಡಿ ದೇವರಾಯ** ಅವರು ರಚಿಸಿದ **ಸಮಗ್ರ ಕತೆಗಳು** ಕಥಾ ಸಂಕಲನದಿಂದ ಆಯ್ದ **ಮಗ್ಗದ ಸಾಹೇಬ** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ಮಗ್ಗದ ಸಾಹೇಬ | "ಮಗ್ಗವಲ್ಲ ಕೊರಳಿಗೆ ಹಗ್ಗ" | ಅಬ್ದುಲ್ ರಹೀಮ್ ಸಾಹೇಬನು ಮಗ್ಗದ ಸಾಹೇಬ ಎಂದು ಹೇಳಿದವರಿಗೆ ಹೇಳುತ್ತಾನೆ | ಮಗ್ಗದ ಸಾಹೇಬ ಎಂದು ಹೇಳುವವರಿಗೆ ಅವನು ಯಾವ ರೀತಿಯ ಪ್ರತಿಕ್ರಿಯೆ ನೀಡುತ್ತಿದ್ದನು ಎಂದು ಹೇಳುವ ಸಂದರ್ಭ |
| | "ಕಳ್ಳನಾದವನು, ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ" | ಅಬ್ದುಲ್ ರಹೀಮನು ತನ್ನ ಮನಸ್ಸಿನಲ್ಲಿ ಆಣೆ ಹಾಕುತ್ತ ಹೇಳಿಕೊಳ್ಳುತ್ತಾನೆ | ನಾಟಕಕ್ಕೆಂದು ತಾಯಿಯ ಚಿನ್ನದ ಸರವನ್ನು ತೆಗೆದುಕೊಂಡು ಮಾಯವಾದಾಗ ಮಗನ ಮೇಲೆ ಕೋಪ ಬಂದ ಸಂದರ್ಭ |
| | "ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ" | ಅಬ್ದುಲ್ ಕರೀಮ್ ಮುಖ್ಯೋಪಾಧ್ಯಾಯ ಶಂಕರಪ್ಪ ಅವರಿಗೆ ಹೇಳಿದನು | ತಂದೆ ಮಗನನ್ನು ಮನೆಗೆ ಸೇರಿಸಿಕೊಳ್ಳದಿದ್ದಾಗ ಶಂಕರಪ್ಪರವರಿಗೆ ತನ್ನ ತಂದೆಯೊಡನೆ ಸಂಧಾನ ಮಾಡಿಸಿರಿ ಎಂದು ಹೇಳುವ ಸಂದರ್ಭ |
| | "ದೇವರು ದೊಡ್ಡವನು ದೇವರು ದಯಾಳು" | ಅಬ್ದುಲ್ ರಹೀಮ್ ಮುಖ್ಯೋಪಾಧ್ಯಾಯ ಶಂಕರಪ್ಪ ಅವರಿಗೆ ಹೇಳಿದನು | ರಹೀಮ್ ತನ್ನ ಮಗನಿಗೆ ಪದ್ಮಭೂಷಣ ಬಿರುದು ದೊರಕಿದೆ ಎಂಬುದು ಪತ್ರಿಕೆಯಲ್ಲಿ ಬಂದಿದ್ದು ಶಂಕರಪ್ಪ ಅವರು ಹೇಳಿದಾಗ ರಹೀಮನು ಸಂತೋಷದಿಂದ ಹೆಮ್ಮೆಪಡುವ ಸಂದರ್ಭದಲ್ಲಿ |

**ಸಂದರ್ಭ ಬರೆಯುವ ಮಾದರಿ**

**ಆಯ್ಕೆ:** ಈ ವಾಕ್ಯವನ್ನು ಕವಿ/ಲೇಖಕರ ಹೆಸರು ಅವರು ಬರೆದ ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು ಪಾಠದಿಂದ ಆರಿಸಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನುಬರೆಯಬೇಕು.

**ಸ್ವಾರಸ್ಯ:** ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು/ ಗುಣವನ್ನು ಕುರಿತು ಬರೆಯಬೇಕು.

## ಘಟಕ ಪರೀಕ್ಷೆ

## ಗದ್ಯ–೧ ಮಗ್ಗದ ಸಾಹೇಬ.

**ಅಂಕ–೧೦** **ಸಮಯ : ೨೦ ನಿಮಿಷ**

**ವಿದ್ಯಾರ್ಥಿ ಹೆಸರು :** **ಹಾಜರಿ ಸಂಖ್ಯೆ :**

---

**ಅ) ಒಂದು ವಾಕ್ಯದಲ್ಲಿ ಉತ್ತರಿಸಿ.** **೪ * ೧=೪**

೧.ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?

-----------------------------------------------------------------------

೨. ಅಬ್ದುಲ್ ರಹೀಮನ ಹಠವೇನು?

-----------------------------------------------------------------------

೩. ರಹೀಮನು ಮಗನನ್ನು ಶಾಲೆಯಿಂದ ಬಿಡಿಸಿದ್ದು ಏಕೆ?

-----------------------------------------------------------------------

೪. ಅಬ್ದುಲ್ ರಹೀಮನ ಪೂರ್ವಜರ ಹೆಸರೇನು?

-----------------------------------------------------------------------

**ಆ) ಸಂದರ್ಭದಲ್ಲಿ ವಿವರಿಸಿ** **೩*೧=೩**

೫. "ದೇವರು ದೊಡ್ಡವನು ದೇವರು ದಯಾಳು".

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

----------------------------------------

**ಇ) ಈ ಕೆಳಗಿನ ಕವಿಯ ಕಾಲ ಸ್ಥಳ ಕೃತಿ ಮತ್ತು ಪ್ರಶಸ್ತಿಗಳ ಕುರಿತು ಬರೆಯಿರಿ.** **೩*೧=೩**

೬. ಬಾಗಲೋಡಿ ದೇವರಾಯ.

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

# ಪದ್ಯ ೧. ಕನ್ನಡಿಗರ ತಾಯಿ.



## ರಾಷ್ಟ್ರಕವಿ ಎಂ. ಗೋವಿಂದ ಪೈ

### ಕೃತಿಕಾರರ ಪರಿಚಯ

**ರಾಷ್ಟ್ರಕವಿ ಎಂ ಗೋವಿಂದ ಪೈ** ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ **೨೩-೦೨-೧೮೮೩** ರಲ್ಲಿ ಜನಿಸಿದರು. ತಂದೆ ಸಾಹುಕಾರ ತಿಮ್ಮಪ್ಪೈ ತಾಯಿ ದೇವಕಿಯಮ್ಮ. ಪ್ರಾಸ ಬಿಟ್ಟು ಪದ್ಯ ರಚಿಸಿದ ಮೊದಲ ಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಇವರು **ಗಿಳಿವಿಂಡು, ನಂದಾದೀಪ, ಸಿಂಗಾಲ ಸುತ್ತ, ಸುವಾಸಿನಿ, ವೈಶಾಖ ಮತ್ತು ಗೊಲ್ಗೊಥಾ** ಎಂಬ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಮೊದಲ ರಾಷ್ಟ್ರಕವಿ ಎಂಬ ಬಿರುದು ನೀಡಲಾಗಿದೆ ೧೯೫೦ರಲ್ಲಿ ಬೊಂಬಾಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ನೀಡಿ ಗೌರವಿಸಲಾಗಿದೆ.

**ಚಟುವಟಿಕೆ-೧**

- ಪ್ರಮುಖ ಅಂಶಗಳನ್ನು ಗುರುತಿಸುವುದು.

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ- ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |

- **ಪದ್ಯ ಭಾಗದ ಪ್ರಮುಖ ಅಂಶಗಳು.**

೧. ಎಂ ಗೋವಿಂದ ಪೈ ರವರು ಕರ್ನಾಟಕದ ಏಕೀಕರಣದ ಪರ್ವದಲ್ಲಿ ಕನ್ನಡ ತಾಯಿಯನ್ನು ಸ್ತುತಿಸಿ ಬರೆದ ಕವನ.

೨. ಕನ್ನಡ ನಾಡು –ನುಡಿಯ ಶ್ರೇಷ್ಠತೆ, ಭವ್ಯ ಪರಂಪರೆ, ಇತಿಹಾಸ, ಪ್ರಾಕೃತಿಕ, ಸಾಹಿತ್ಯಿಕ, ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನಲ್ಲಿ ಹರಡಬೇಕೆಂಬುದು ಕವಿಯ ಆಶಯ.

೩. ನಮ್ಮ ಜನ್ಮದಾತೆಯಾದ ಕನ್ನಡ ತಾಯಿ ನಮ್ಮ ತಪ್ಪನ್ನು ಸಹಿಸುತ್ತಾಳೆ. ಅಕ್ಕರೆಯಿಂದ ನಮ್ಮನ್ನು ಆಳುತ್ತಾಳೆ. ನಮ್ಮ ಬಾಳ್ವೆಯೇ ಕನ್ನಡ.

೪. ನಮ್ಮ ತನು, ಮನ, ನುಡಿ ಎಲ್ಲವೂ ಕನ್ನಡ ಆದ್ದರಿಂದ ನಾವು ನಮ್ಮ ತಾಯಿಯನ್ನು ಮರೆಯುವುದಿಲ್ಲ.

೫. ಕನ್ನಡ ನಾಡಿನಲ್ಲಿ ವಿಧವಿಧವಾದ ಹಣ್ಣುಗಳನ್ನು, ಕಾಯಿಗಳನ್ನು, ಪತ್ರೆ, ಹೂವುಗಳನ್ನು ನೀಡುವಂತಹ ಮರ– ಬಳ್ಳಿಗಳು ಇವೆ. ಪರ್ವತಗಳು ಪ್ರಾಣಿ–ಪಕ್ಷಿ– ಹಾವುಗಳ ಸಮೂಹವಿದೆ.

೬. ಕನ್ನಡ ತಾಯಿಯ ಒಡಲು ಜೈನರ ಪೂಜ್ಯರಾದಂತಹ ಕೊಂಡಕುಂದವರ್ಯರ, ಮುಖ್ಯ ಮತಾಚಾರ್ಯದಂತಹ ಮಧ್ವಾಚಾರ್ಯರ, ಬಸವೇಶ್ವರರ, ಕವಿ ಶ್ರೇಷ್ಠರಾದ ಪಂಪ, ರನ್ನ, ಲಕ್ಷ್ಮೀಪತಿ, ಜನ್ನ, ಪುರಂದರದಾಸರ, ವಿದ್ಯಾರಣ್ಯರ ಹೊನ್ನ ಗಣಿಯಾಗಿದೆ.

೭. ಬೇಲೂರು– ಹಳೇಬೀಡು ಇತ್ಯಾದಿ ಶಿಲ್ಪ ಕಲೆಗಳ ಹಿಂದೆ ಇರುವ ಹಿನ್ನೆಲೆಯ ಕಥೆ ಸವಿಯಾದ ಹಾಲಿನಂತಿರುವ ಮಾತುಗಳಿಂದ ಕೂಡಿದೆ.

೮. ಕಸ್ತೂರಿ ಮೃಗ ಹೇಗೆ ತನ್ನ ಮೈಯ ಸುವಾಸನೆಯನ್ನು ಅರಿಯದೆ, ಹೊರಗೆ ಹುಡುಕುತ್ತದೆಯೋ, ಹಾಗೆ ನಮ್ಮ ಸವಿಯಾದ ನುಡಿಯ ಮಹತ್ವ ಅರಿಯದೆ ನಾವು ಬೇರೆ ಭಾಷೆಯ ವ್ಯಾಮೋಹಕ್ಕೆ ಒಳಗಾಗಿದ್ದೇವೆ.

೯. ಕನ್ನಡ ತಾಯಿ ಎಲ್ಲರ ನಡೆ–ನುಡಿ, ಆಚಾರ–ವಿಚಾರಗಳಲ್ಲಿ ನೆಲೆಯಾಗಬೇಕು. ಕನ್ನಡಿಗರ ಧಮನಿ ಧಮನಿಗಳಲ್ಲಿಯೂ ಕನ್ನಡವೇ ಉಸಿರಾಗಬೇಕು.

೧೦.ಕನ್ನಡ ನಾಡಿನಲ್ಲಿ ಎಲ್ಲಾ ಸಂಪತ್ತು ಇದೆ. ತಾಯಿಯ ಮುಖ ಕಂಡಾಗ ಅದೆಲ್ಲ ಗೋಚರಿಸುತ್ತದೆ. ಹೀಗೆ ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ.

**ಚಟುವಟಿಕೆ–೨ : ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.**

| |
|---|
| |
| |
| |
| |

**ಚಟುವಟಿಕೆ–೩ :ಈ ಕೆಳಗೆ ನೀಡಿರುವ ಪದಗಳನ್ನಾದಾರಿಗಿಸಿ ಮುಂದಿನ ಸಾಲನ್ನು ನೆನಪಿಸಿಕೊಂಡು ಬರೆಯಿರಿ.**

**ಎಂ ಗೋವಿಂದ ಪೈ ಅವರು** ---------------------------------------------------------------

**ಜೈನರಾದ** ---------------------------------------------------------------

**ಮಧ್ವ ಯತಿಯೇ**---------------------------------------------------------------

**ಪರ್ವ**---------------------------------------------------------------

**ಲಕ್ಷ್ಮೀಪತಿ** ---------------------------------------------------------------

**ಪುರಂದರ** ---------------------------------------------------------------

**ತಾಯೆ,ನಿನ್ನ** ---------------------------------------------------------------

**ಚಟುವಟಿಕೆ–೪ :ಮೇಲೆ ರಚಿಸಿದ ಎಲ್ಲಾ ವಾಕ್ಯಗಳನ್ನು ಒಂದರ ಹಿಂದೆ ಒಂದರಂತೆ ಜೋಡಿಸಿ ಕಥಾ ರೂಪದಲ್ಲಿ ಬರೆಯಿರಿ.**

| |
|---|
| |
| |
| |
| |
| |
| |
| |
| |

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು**

೧. ನಮ್ಮನ್ನು ಆಳುವವಳು ಯಾರು?

ಉತ್ತರ : ನಮ್ಮನ್ನು ಆಳುವವಳು ಕನ್ನಡಾಂಬೆ.

---------------------------------------------------------------

೨. ಲತೆ ಯಾವುದನ್ನೆಲ್ಲ ನೀಡುತ್ತದೆ?

ಉತ್ತರ : ಲತೆ ಪತ್ರ ಪುಷ್ಪಗಳನ್ನು ನೀಡುತ್ತದೆ.

---------------------------------------------------------------

೩. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?

ಉತ್ತರ : ಕನ್ನಡ ತಾಯಿಯ ಬಸಿರ ಹೊನ್ನಗನಿ ವಿದ್ಯಾರಣ್ಯರು.

೪. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?

ಉತ್ತರ : ಕನ್ನಡ ತಾಯಿಯ ಹಾಡನ್ನು ಹೊಸ ಕಿನ್ನರಿಯಲ್ಲಿ ಉಕ್ಕಿಸಬೇಕು.

೫. ಕನ್ನಡಿಗರ ಪಾಡು ಏನು?

ಉತ್ತರ : ಕನ್ನಡಿಗರ ಪಾಡು ಮೃಗದ ಸೇಡಿನಂತಾಗಿದೆ.

- **ಎರಡು – ಮೂರು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು.**

೧. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?

ಉತ್ತರ : ಕನ್ನಡ ನಾಡಿನ ಪ್ರಕೃತಿ ಸಂಪದ್ಭರಿತವಾಗಿದ್ದು ಹಣ್ಣು–ಕಾಯಿಗಳನ್ನು ನೀಡುವ ವಿವಿಧ ರೀತಿಯ ಮರಗಳು, ಪತ್ರ ಪುಷ್ಪಗಳನ್ನು ನೀಡುವ ಬಗೆ ಬಗೆಯ ಬಳ್ಳಿಗಳಿಂದ ಕೂಡಿದೆ. ಅಲ್ಲದೆ ಕೆನ್ನೆ ಭರಿತವಾದ ಹಾಲು ತೆನೆಗಳಿಂದ ಕೂಡಿದ ಬೆಳೆಗಳ ಮೇಲಿನಿಂದ ಬೀಸಿ ಬರುವ ತಂಗಾಳಿ, ಪ್ರಾಣಿ ಪಕ್ಷಿಗಳ ಸಮೂಹ, ನದಿಗಳು, ನಗರಗಳು, ಪರ್ವತಗಳು ಹೀಗೆ ಇಲ್ಲಿ ಇಲ್ಲದಿರುವುದೇ ಇಲ್ಲ ಸ್ವರ್ಗವೇ ಭೂಮಿಗೆ ಇಳಿದಂತೆ ಮನೋಹರವಾಗಿದೆ.

೨. ಕನ್ನಡದ ಕವಿ ಶ್ರೇಷ್ಠರ ಹಿರಿಮೆಯೇನು?

ಉತ್ತರ : ಕನ್ನಡ ನಾಡು ಹಲವಾರು ಕವಿ ಶ್ರೇಷ್ಠರ ಉದಯಕ್ಕೆ ಕಾರಣವಾಗಿದೆ. ಕೊಂಡ ಕುಂದಾಚರ್ಯರ, ಮಧ್ವಾಚರ್ಯರ, ಬಸವಣ್ಣನವರ, ಆಚರ್ಯರ, ನೃಪತುಂಗ, ಪಂಪ, ರನ್ನ, ಲಕ್ಷ್ಮೀಶ, ಜನ್ನ, ಷಡಕ್ಷರಿ, ಮುದ್ದಣ ಮೊದಲಾದ ಶ್ರೇಷ್ಠ ಕವಿಗಳು ಇಲ್ಲಿ ಜನಿಸಿದ್ದಾರೆ. ಹಾಗೆಯೇ ಪುರಂದರ ದಾಸರಂತಹದಾಸ ಶ್ರೇಷ್ಠರು, ವಿದ್ಯಾರಣ್ಯರಂತಹ ಮಹಿಮರು ಈ ಕನ್ನಡ ತಾಯಿಯ ಹೊನ್ನಿನ ಗಣಿಯಂತಹ ರ್ಭದಲ್ಲಿ ಜನಿಸಿರುವುದು ಹಿರಿಮೆಯಾಗಿದೆ.

---------------------------------------------------------------------------------------------------------------------------

------------------------------------------------------------

- **ಸಂದರ್ಭ ಬರೆಯುವ ಮಾದರಿ**

**ಆಯ್ಕೆ:** ಈ ವಾಕ್ಯವನ್ನು ---------------------------- ಅವರು -------------------------- ಎಂಬ ಕೃತಿಯಿಂದ ಆಯ್ದುಕೊಂಡ-------------------------------ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ**: ಈ ಮಾತನ್ನು ಯಾರು ಯಾರಿಗೆ ಯಾವಾಗ ಏಕೆ ಹೇಳಿದರು ಎಂಬ ಅಂಶವನ್ನು ಬರೆಯಬೇಕು.

**ಸ್ವಾರಸ್ಯ:** ಈ ಮಾತಿನ ವಿಶೇಷತೆಯನ್ನು ಮೌಲ್ಯವನ್ನು/ ಗುಣವನ್ನು/ ಕುರಿತು ಬರೆಯಬೇಕು.

- **ಸಂದರ್ಭದ ಹೇಳಿಕೆಗಳು**

**ಆಯ್ಕೆ:** ಈ ವಾಕ್ಯವನ್ನು ಎಂ ಗೋವಿಂದ ಪೈ ಅವರು ಬರೆದಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆಯ್ದ ಕನ್ನಡಿಗರ ತಾಯಿ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

| ಪದ್ಯ ಭಾಗ | ಸಾಂದರ್ಭಿಕ ಪ್ರಶ್ನೆಗಳು | ಯಾರು, ಯಾರಿಗೆ | ಸಂದರ್ಭ |
|---|---|---|---|
| ಕನ್ನಡಿಗರ ತಾಯಿ | ಖಗಮೃಗೋರ ಗಾಳಿಯೋ | ಕವಿಯು ಓದುಗರಿಗೆ | ಸಂಪದ್ಭರಿತ ಪ್ರಕೃತಿಯನ್ನು ವರ್ಣಿಸುವ ಸಂದರ್ಭದಲ್ಲಿ |
| ಕನ್ನಡಿಗರ ತಾಯಿ | ನಿನ್ನ ಕಲ್ಲೆನುಡಿವುದಲ್ಲ | ಕವಿಯು ಓದುಗರಿಗೆ | ವಾಸ್ತುಶಿಲ್ಪ ವೈಭವವನ್ನು ವರ್ಣಿಸುವ ಸಂದರ್ಭದಲ್ಲಿ |
| ಕನ್ನಡಿಗರ ತಾಯಿ | ನಮ್ಮ ಮನಮನೊಂದೆ ಕಲಸು | ಕವಿಯು ಓದುಗರಿಗೆ | ನಮ್ಮೆಲ್ಲರ ಮನಸ್ಸನ್ನು ಒಗ್ಗೂಡಿಸುವಂತೆ ಹೇಳುವ ಸಂದರ್ಭದಲ್ಲಿ |

******

## ಘಟಕ ಪರೀಕ್ಷೆ

## ಪದ್ಯ –೧ ಕನ್ನಡಿಗರ ತಾಯಿ

ಅಂಕಗಳು : ೧೦. ಸಮಯ : ೧೫ನಿಮಿಷ.

---

**ಅ) ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು.** **೧*೩=೩**

೧. ನಮ್ಮನ್ನು ಆಳುವವಳು ಯಾರು?

ಉತ್ತರ:------------------------------------------------------------------------

೨. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?

ಉತ್ತರ:------------------------------------------------------------------------

೩. ಲತೆ ಯಾವುದನ್ನೆಲ್ಲ ನೀಡುತ್ತದೆ?

ಉತ್ತರ:------------------------------------------------------------------------

**ಆ) ಎರಡು ಮೂರು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು.** **೨*೨=೪**

೪. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು?

ಉತ್ತರ:------------------------------------------------------------------------

------------------------------------------------------------------------

------------------------------------------------------------------------

------------------------------------------------

೫. ಕನ್ನಡದ ಕವಿ ಶ್ರೇಷ್ಠರ ಹಿರಿಮೆಯೇನು?

ಉತ್ತರ:------------------------------------------------------------------------

------------------------------------------------------------------------

------------------------------------------------------------------------

------------------------------------------------

**೬. ಗೋವಿಂದ ಪೈ ಅವರ ಕವಿ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ .** **೧*೩=೩**

ಉತ್ತರ:------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

****

## ಪಠ್ಯಪೂರಕ ಅಧ್ಯಯನ

### ೧. ಸಾರ್ಥಕ



– ದಿನಕರ ದೇಸಾಯಿ

**ಚಟುವಟಿಕೆ: 1 ಈ ಕೆಳಗಿನ ಪ್ರಶ್ನೆಗಳನ್ನು ಓದಿ ಮನನ ಮಾಡಿಕೊಂಡು ಕೆಳಗಿನ ಖಾಲಿ ಜಾಗದಲ್ಲಿ ಬರೆಯಿರಿ.**

೧).ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?

ಉತ್ತರ : ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಭತ್ತ ಬೆಳೆಯುವಲ್ಲಿ ಬೀಳುತ್ತದೆ.

೨). ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಯಾರಿಗೆ ಸಿಗುತ್ತದೆ?

ಉತ್ತರ : ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಮೀನಿಗೆ ಸಿಗುತ್ತದೆ.

೩). ದೇಹ ಏಕೆ ವ್ಯರ್ಥವಾಗಿದೆ?

ಉತ್ತರ : : ತನ್ನ ಸ್ವಾರ್ಥವ ನೆನೆದು ದೇಹ ವ್ಯರ್ಥವಾಗಿದೆ.

೪). ಏನನ್ನು ತಿಂದು ಮೀನು ಪುಷ್ಟವಾಗುತ್ತದೆ?

ಉತ್ತರ : ಮುಷ್ಟಿಯ ಬೂದಿಯ ತಿಂದು ಮೀನು ಪುಷ್ಟವಾಗುತ್ತದೆ.

೫). ಹೊಸ ಪಂಕಜವು ಹೇಗೆ ಮೂಡುತ್ತದೆ?

ಉತ್ತರ : ಬೂದಿ ಕೆಸರನ್ನು ಕೂಡಿ ಹೊಸ ಪಂಕಜವು ಮೂಡುತ್ತದೆ.

೬). ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ ವಿವರಿಸಿ?

ಉತ್ತರ : ದೇಹದ ಬೂದಿಯನ್ನು ತಾವರೆಯು ಬೆಳೆಯುವ ಕೊಳದಲ್ಲಿ ಬಿಟ್ಟಾಗ ಆ ಬೂದಿ ಕೆಸರನ್ನು ಸೇರಿ ಹೊಸ ತಾವರೆಯು ಅರಳಿದರೆ ಆ ಮೂಲಕ ಹುಟ್ಟು ಸಾವಿನಲ್ಲಿ ಧನ್ಯವಾಗುತ್ತದೆಂದು ಕವಿ ಹೇಳಿದ್ದಾರೆ.

೭). ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ?

ಉತ್ತರ : ಮಾನವನು ಸ್ವಾರ್ಥಿಯಾಗಿದ್ದಾನೆ. ಆತನು ಬದುಕಿದ್ದಾಗ ಆತನ ಜೀವನ ಸಾರ್ಥಕತೆ ಪಡೆದಿದ್ದರೂ ಸತ್ತ ಮೇಲಾದರೂ ಧನ್ಯತೆಯನ್ನು ಪಡೆಯಲಿ ಎಂದು ಕವಿ ಮಾರ್ಮಿಕವಾಗಿ ಹೇಳಿರುವ ಮಾತು ಮೆಚ್ಚುವ ಅಂಶವಾಗಿದೆ. ಸತ್ತ ನಂತರ ದೇಹವನ್ನು ಸುಡಲಾಗುತ್ತದೆ ಆ ನಂತರ ಆ ಬೂದಿಯನ್ನು ಭತ್ತ ಬೆಳೆಯುವ ಗದ್ದೆಗೆ, ಮೀನು ವಾಸಿಸುವ ಹೊಳೆಗೆ, ತಾವರೆ ಬೆಳೆಯುವ ಕೊಳಕ್ಕೆ ಹಾಕುವುದರ ಮೂಲಕ ಸತ್ತ ಮೇಲಾದರೂ ಪರೋಪಕಾರಕ್ಕೆ ದೇಹ ಬಳಕೆಯಾಗಲಿ ಎಂದು ಕವಿ ಹೇಳಿರುವ ಮಾತುಗಳು ಮೆಚ್ಚುಗೆಯಾಗುತ್ತದೆ.

*************

## ಗದ್ಯಪಾಠ –೨ ಸಾರ್ಥಕ ಬದುಕಿನ ಸಾಧಕ–ಡಿ.ವಿ.ಜಿ

## – ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು



## ಕೃತಿಕಾರರ ಪರಿಚಯ

**ಡಾ॥ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ೨೯–೧೦–೧೯೩೬**ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. **ವೃತ್ತ, ಚಿತ್ರಕೂಟ, ಸುಳಿ** ಎಂಬ ಕವನ ಸಂಕಲನಗಳನ್ನು ಮತ್ತು **'ಸಾಹಿತ್ಯ ರತ್ನ ಸಂಪುಟ'** ಎಂಬ ಕೃತಿಯನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ, ಆಳ್ವಾಸ್ ನುಡಿಸಿರಿ, ರೈಭಟ ಪ್ರಶಸ್ತಿಗಳು ದೊರೆತಿವೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |
| |
| |
| |

**ಪಾಠದ ಮುಖ್ಯಾಂಶಗಳು**

೧. ‘ಡಿ.ವಿ.ಜಿ ಎಂದರೆ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಎಂದರ್ಥ.

೨. ‘ಡಿ.ವಿ.ಜಿ’ ಯವರು ಮೈಸೂರಿನ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರ ಆಪ್ತರಾಗಿದ್ದರು.

೩. ‘ಡಿ.ವಿ.ಜಿ’ ಒಬ್ಬ ಶೀಲವಂತ, ವಿವೇಕವಂತ, ಪಂಡಿತ, ಮೇಧಾವಿ, ಆಮಿಷಕ್ಕೊಳಗಾಗದ ಪತ್ರಕರ್ತ ಮತ್ತು ಮೇರು ಸಾಹಿತಿಯಾಗಿದ್ದರು.

೪. ‘ಡಿ.ವಿ.ಜಿ’ ಯವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು. ತಂದೆ–ವೆಂಕಟರಮಣಯ್ಯ, ತಾಯಿ–ಅಲಮೇಲಮ್ಮ.

೫. ‘ಡಿ.ವಿ.ಜಿ’ ಯವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಅವರ ಅಜ್ಜಿ–ಸಾಕಮ್ಮ ಮತ್ತು ಸೋದರಮಾವ ತಿಮ್ಮಪ್ಪ. ‘ಮಂಕುತಿಮ್ಮನ ಕಗ್ಗ’ ದ ಪ್ರಮುಖ ಪಾತ್ರಧಾರಿ.

೬. ‘ಡಿ.ವಿ.ಜಿ’ ಯವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳಿಸಿದವನು ಡಿವಿಜಿಯವರ ತಂದೆಯ ಆಪ್ತ ಬಂಡಿ ಹೊಡೆಯುವ ಬಡವ ರಸೂಲ್‌ಖಾನ್,

೭. ‘ಡಿ.ವಿ.ಜಿ’ ಯವರು ಪತ್ರಕರ್ತರಾಗಿ ಮೈಸೂರು ದಸರಾದ ಕುರಿತಾಗಿ ವರದಿ ಮಾಡಿದ್ದಕ್ಕಾಗಿ ದಿವಾನ್ ವಿಶ್ವೇಶ್ವರಯ್ಯ ನೀಡಿದ ಸಂಭಾವಣೆಯ ಚೆಕ್‌ನ್ನು ಮರಳಿಸಿದರು.

೮. ಸರ್ಕಾರದ ಹಣ ಅದು ಸಾರ್ವಜನಿಕರ ಹಣ ಅದು ಸಾರ್ವಜನಿಕರ ಹಿತಕ್ಕಾಗಿಯೇ ಬಳಕೆಯಾಗಬೇಕೆಂದು ನಂಬಿದ್ದರು.

೯. ‘ಡಿ.ವಿ.ಜಿ’ ಯವರು ತುಂಬಾ ಬಡವರಾಗಿದ್ದರೂ ತುಂಬಾ ಸ್ವಾಭಿಮಾನಿಯಾಗಿದ್ದರು.

೧೦. ‘ಡಿ.ವಿ.ಜಿ’ ಯವರು ಸಾರ್ವಜನಿಕ ಜೀವನಕ್ಕಾಗಿ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ‘ಗೋಖಲೆ ಸಾರ್ವಜನಿಕ ಸಂಸ್ಥೆ’ ಯನ್ನು ಕಟ್ಟಿದರು.

೧೧. ‘ಡಿ.ವಿ.ಜಿ’ ಯವರು ಓದಿದ್ದು ಕೇವಲ ಎಸ್.ಎಸ್.ಎಲ್.ಸಿ ಆದರೂ ‘ಕನ್ನಡ ಸಾರಸ್ವತ ಲೋಕದ ಭೀಷ್ಮ’ ಎಂದು ಕರೆಸಿಕೊಂಡು ೬೬ ಕೃತಿಗಳನ್ನು ೮೦೦೦ ಸಾವಿರ ಪುಟಗಳ ಸಾಹಿತ್ಯವನ್ನು ೧೫೦೦ ಪುಟಗಳ ಬಿಡಿ ಲೇಖನಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಸಿರಿವಂತ ಸಾಹಿತಿ.ಅವರ ಪ್ರಸಿದ್ಧ ಕೃತಿ ‘ಮಂಕುತಿಮ್ಮನ ಕಗ್ಗ’ ಕನ್ನಡದ ಭಗವದ್ಗೀತೆಯೆಂದೇ ಹೆಸರಾಗಿದೆ.

**ಚಟುವಟಿಕೆ–೨ :** ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.

**ಚಟುವಟಿಕೆ–೩ : ಕೊಟ್ಟಿರುವ ಸುಳಿವನ್ನಾಧರಿಸಿ ವಾಕ್ಯಗಳನ್ನು ಬರೆಯಿರಿ.**

ಸುಳಿವು

ಡಿ.ವಿ.ಜಿ–

ಪತ್ರಕರ್ತ–

ಸಾಹಿತಿ–

ಸರ್.ಎಂ.ವಿಶ್ವೇಶ್ವರಯ್ಯ–

ಮೇಧಾವಿ–

ಸತ್ವಶಾಲಿ–

ಪ್ರಸಿದ್ಧ–

ದಸರಾ–

ಉದಾಸೀನ–

ಪಂಡಿತ–

ಉತ್ಸವ–

- **ಮೇಲೆ ಅಭ್ಯಾಸ ಮಾಡಿರುವ ವಿಷಯಾಂಶವನ್ನು ಸ್ಮರಣೆ ಮಾಡಿಕೊಂಡು ಸ್ವಂತಂತ್ರವಾಗಿ ಬರೆಯಿರಿ.**

- **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಡಿವಿಜಿಯವರ ಹುಟ್ಟೂರು ಯಾವುದು?

ಉತ್ತರ: ಡಿವಿಜಿಯವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು.

----------------------------------------------------------------------

೨. ಡಿವಿಜಿಯವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

ಉತ್ತರ: ಡಿವಿಜಿಯವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಇಬ್ಬರು ವ್ಯಕ್ತಿಗಳು ಒಬ್ಬರು ಅವರ ಅಜ್ಜಿ ಸಾಕಮ್ಮ,ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ.

----------------------------------------------------------------------

೩. ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

ಉತ್ತರ: ಡಿವಿಜಿ ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಅವರ ತಂದೆಗೆ ಬೇಕಾಗಿದ್ದವ ಬಂಡಿ ಹೊಡೆಯುವ ವ್ಯಕ್ತಿ ರಸೂಲ್ ಖಾನ್.

---

೪. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?

ಉತ್ತರ: ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ದಿವಾನ್(ಮಂತ್ರಿ).

---

೫. ಡಿವಿಜಿಯವರು ಸ್ಥಾಪಿಸಿದ ಸಂಸ್ಥೆ ಯಾವುದು?

ಉತ್ತರ: ಡಿವಿಜಿಯವರು ಸ್ಥಾಪಿಸಿದ ಸಂಸ್ಥೆ ಗೋಖಲೆ ಸಾರ್ವಜನಿಕ ಸಂಸ್ಥೆ.

---

- **ಸಂದರ್ಭದ ಹೇಳಿಕೆಗಳು:**

| ಆಯ್ಕೆ | ಸಾಂದರ್ಭಿಕ ಹೇಳಿಕೆಗಳು | ಯಾರು? ಯಾರಿಗೆ? | ಸಂದರ್ಭ(ಯಾವಾಗ?) |
|---|---|---|---|
| ಸಾರ್ಥಕ ಬದುಕಿನ ಸಾಧಕ ಡಿವಿಜಿ | ೧."ಏನು ಬಂದಿರಿ ಗುಂಡಪ್ಪ" | ವಿಶ್ವೇಶ್ವರಯ್ಯನವರು ಡಿವಿಜಿಯವರಿಗೆ ಕೇಳಿದರು. | ಸರ್ಕಾರದಿಂದ ನೀಡಿದ ಹಣವನ್ನು ದಿವಾನ್ ವಿಶ್ವೇಶ್ವರಯ್ಯನವರಿಗೆ ಡಿವಿಜಿಯವರು ಹಿಂತಿರುಗಿಸಲು ಬಂದಾಗ |
| | ೨."ನೀನು ಉತ್ಸವಕ್ಕೆ ಹೋಗುವುದಿಲ್ಲವೆ?" | ಡಿವಿಜಿಯವರು ಹೆಂಡತಿಗೆ ಕೇಳಿದರು. | ತಮ್ಮ ಬಂಧುಗಳ ಮನೆಯ ಉತ್ಸವಕ್ಕೆ ಡಿವಿಜಿಯವರ ಹೆಂಡತಿಯು ಹೋಗದಿದ್ದಾಗ |
| | ೩."ನನ್ನ ಹತ್ತಿರ ಇರುವುದು ಇದೊಂದೇ ಸೀರೆ" | ಡಿವಿಜಿಯವರ ಹೆಂಡತಿಯು ಡಿವಿಜಿಯವರಿಗೆ ಹೇಳಿದಳು. | ತಮ್ಮ ಬಂಧುಗಳ ಮನೆಯ ಉತ್ಸವಕ್ಕೆ ಡಿವಿಜಿಯವರ ಹೆಂಡತಿಯು ಹೋಗದಿರಲು ಕಾರಣ ಕೇಳಿದಾಗ |
| | ೪."ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ" | ಡಿವಿಜಿಯವರು ನಮಗೆ ಹೇಳಿದ್ದಾರೆ. | ಡಿವಿಜಿಯವರು ಮಂಕುತಿಮ್ಮನ ಕಗ್ಗದಲ್ಲಿ ಮಾನವನ ವ್ಯಕ್ತಿತ್ವ ಹೇಗಿರಬೇಕೆಂದು ಎಂದು ಹೇಳುವಾಗ |

ಚಟುವಟಿಕೆ–೩ : **ಮೇಲಿನ ಕೋಷ್ಟಕದಲ್ಲಿರುವ ಆಯ್ಕೆ, ಸಂದರ್ಭ, ಸ್ವಾರಸ್ಯಗಳನ್ನು ಕೆಳಗಿನ ಖಾಲಿ ಸ್ಥಳಗಳಲ್ಲಿ ಕ್ರಮಬದ್ಧವಾಗಿ ತುಂಬಿರಿ.**

**ಆಯ್ಕೆ :** ಈ ಮೇಲಿನ ಮಾತನ್ನು ---------------------------------------------- ಅವರು ಬರೆದಿರುವ --------------------------------------------------- ಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ------------------------------------------------------- ಸಂದರ್ಭದಲ್ಲಿ ----------------------------------------------------------------- ಹೇಳಿದರು.

**ಸ್ವಾರಸ್ಯ :** ಈ ಮಾತಿನಲ್ಲಿ ------------------------------------------------------------------ -------------------------------------- ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

- **ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕಿರುವ ಸಂಬಂಧವನ್ನು ಬರೆಯಿರಿ:**

೧. ಸಾಕಮ್ಮ: ಡಿವಿಜಿಯವರ ಅಜ್ಜಿ ::ತಿಮ್ಮಪ್ಪ:------------------

೨. ಮಂಕುತಿಮ್ಮನ ಕಗ್ಗ: ಡಿವಿಜಿ :: ಸುಳಿ:--------------------

೩. ರಾಯಚೂರು: ಅಂಕಿತನಾಮ :: ಜನರು:------------------

೪. ದೊಡ್ಡ: ಗುಣವಾಚಕ :: ಎರಡು:---------------------

೫. ಕೆಲವು: ಪರಿಮಾಣವಾಚಕ :: ಇಂಥ:--------------------

೬. ಈಶಾನ್ಯ: ದಿಗ್ವಾಚಕ :: ಮೊದಲನೆಯ:-------------------

೭. ನಾನು: ಉತ್ತಮಪುರುಷ :: ನೀನು:---------------------

೮. ತಾನು: ಆತ್ಮಾರ್ಥಕ ಸರ್ವನಾಮ :: ಯಾರು ?:--------------

************

## ಘಟಕ ಪರೀಕ್ಷೆ

## ಗದ್ಯ 2 ಸಾರ್ಥಕ ಬದುಕಿನ ಸಾಧಕ –ಡಿವಿಜಿ

ಅಂಕ–10 ಸಮಯ : 20 ನಿಮಿಷ

**ಅ) ಒಂದು ವಾಕ್ಯದಲ್ಲಿ ಉತ್ತರಿಸಿರಿ.** **3×1=3**

1. ಡಿವಿಜಿ ಅವರ ಹುಟ್ಟೂರು ಯಾವುದು?

---

2. ಡಿವಿಜಿಯವರ ಮೇಲೆ ಪ್ರಭಾವ ಬೀರಿದವರು ಯಾರು ?

---

3. ಡಿವಿಜಿಯವರು ಸ್ಥಾಪಿಸಿದ ಸಂಸ್ಥೆ ಯಾವುದು?

---

**ಆ) ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ** **2×2=4**

4. ರಸೂಲ್ ಖಾನ್ ಅವರು ಡಿವಿಜಿಯವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು ?

---

---

---

5. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು?

---

---

---

**ಇ) ಸಂದರ್ಭದೊಡನೆ ವಿವರಿಸಿ.** **3×1=3**

6. "ಏನು ಬಂದಿರಿ ಗುಂಡಪ್ಪ?"

---

---

---

---

---

---

---

---

–******

## ಪದ್ಯ– ೨. ಭಾರತೀಯತೆ .



### –ಕೆ.ಎಸ್.ನರಸಿಂಹಸ್ವಾಮಿ

### ಕೃತಿಕಾರರ ಪರಿಚಯ

**ಕೆ.ಎಸ್.ನರಸಿಂಹಸ್ವಾಮಿಯವರು** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಕಿಕ್ಕೇರಿ**ಯಲ್ಲಿ ಸಾ.ಶ. **೧೯೧೫** ರಲ್ಲಿ ಜನಿಸಿದರು. ಇವರು **ಮೈಸೂರು ಮಲ್ಲಿಗೆ, ತೆರೆದ ಬಾಗಿಲು, ಶಿಲಾಲತೆ, ಇರುವಂತಿಗೆ, ನವಪಲ್ಲವ, ದೀಪದ ಮಲ್ಲಿ** ಮೊದಲಾದ ಕವನಸಂಕಲನಗಳನ್ನು ರಚಿಸಿದ್ದಾರೆ. ಇವರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ '**ಪ್ರೇಮಕವಿ**' ಎಂದೇ ಇವರು ಪ್ರಸಿದ್ಧರಾಗಿದ್ದಾರೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**
-

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |
| |
| |
| |

- **ಪದ್ಯ ಭಾಗದ ಪ್ರಮುಖಾಂಶಗಳು:**

೧. ಭಾರತ ದೇಶದ ಆಕಾಶದಷ್ಟು ಎತ್ತರವಾಗಿರುವ ಪರ್ವತ ಪ್ರದೇಶಗಳಲ್ಲಿ, ಕರಾವಳಿಯ ತೀರ ಪ್ರದೇಶಗಳಲ್ಲಿ, ಬಯಲು ಪ್ರದೇಶಗಳಲ್ಲಿ ಅನೇಕ ಜನರು ವಾಸಿಸುತ್ತಿದ್ದಾರೆ.

೨. ಭಾರತ ದೇಶದ ಬೇರೆ ಬೇರೆ ಪ್ರದೇಶಗಳಲ್ಲಿ ವಾಸ ಮಾಡುವವರ ಕಣ್ಣುಗಳು ಬೇರೆಯಾದರೂ ನೋಟವು ಒಂದೇ ಆಗಿದೆ.

೩. ನಮ್ಮ ದೇಶದಲ್ಲಿ ಹಲವಾರು ಗಡಿಪ್ರದೇಶಗಳಿವೆ.

೪. ನಮ್ಮ ದೇಶದಲ್ಲಿ ಹಲವಾರು ಕಡಲುಗಳಿವೆ.

೫. ನಮ್ಮ ದೇಶದ ಗಡಿಗಳಲ್ಲಿ, ಕಡಲಿನ ಗಡಿಗಳಲ್ಲಿ, ಆಕಾಶದ ಗಡಿಗಳಲ್ಲಿ ನಮ್ಮಯೋಧರು ಬಾವುಟಗಳನ್ನು ಹಾರಿಸುತ್ತಿದ್ದಾರೆ.

೬. ನಮ್ಮ ಎಲ್ಲರ ತಾಯಿ ಭಾರತಮಾತೆಯಾಗಿದ್ದಾಳೆ. ನಮ್ಮೆಲ್ಲರನ್ನು ಪೊರೆಯುತ್ತಿದ್ದಾಳೆ

೭. ಭಾರತದೇಶದಲ್ಲಿ ಹಲವಾರು ಭಾಷೆಗಳಿದ್ದರೂ ಭಾರತೀಯರೆಲ್ಲರ ಭಾವನೆಗಳು ಒಂದೇಆಗಿವೆ.

೮. ತಾಯ್ನಾಡಿಗೆ ಪ್ರಾಣತ್ಯಾಗ ಮಾಡಿರುವ ಅನೇಕ ಹುತಾತ್ಮರು ನಮ್ಮದೇಶದಲ್ಲಿದ್ದಾರೆ.

೯. ನಾವು ಕಷ್ಟದಲ್ಲಿದ್ದರೂ ಪರರಕಷ್ಟಗಳಿಗೆ ಮಿಡಿಯುವ ಮನಸ್ಸು ಸಂಸ್ಕಾರ ನಮ್ಮದು.

೧೦.ಬಿರುಗಾಳಿ ಎಂಬ ಭಯಾನಕತೆಯಲ್ಲಿಯೂ ನಾವು ನಮ್ಮ ಗುರಿಯ ಬೆಳಕಿನಡೆಗೆ ಸಾಗುತ್ತಿದ್ದೇವೆ.

೧೧.ನಾವು ಯಾವುದೇ ರಾಜ್ಯದಲ್ಲಿದ್ದರೂ ನಾವು ಭಾರತೀಯರು ಎಂದು ಕವಿ ಅಭಿಮಾನದಿಂದ ಹೇಳಿದ್ದಾರೆ.

**ಚಟುವಟಿಕೆ–೨ : ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.**

| |
|---|
| |
| |
| |
| |
| |

- **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪರ್ವತ ಹಿಮ ಯಾವ ಎತ್ತರಕ್ಕೆ ಎದ್ದು ನಿಂತಿದೆ?

ಉತ್ತರ : ಪರ್ವತ ಹಿಮವು ಆಕಾಶದ ಎತ್ತರಕ್ಕೆ ಎದ್ದು ನಿಂತಿದೆ.

--------------------------------------------------------------------------------

೨. ಪೆರ್ದರೆಗಳು ಯಾವುದಕ್ಕೆ ಮುತ್ತ ನೀಡುತ್ತಿವೆ?

ಉತ್ತರ : ಪೆರ್ದರೆಗಳು ಕರಾವಳಿಗೆ ಮುತ್ತ ನೀಡುತ್ತಿವೆ.

--------------------------------------------------------------------------------

೩. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

ಉತ್ತರ : ಹಸಿರು ದೀಪವನ್ನು ಬಯಲು ತುಂಬಾ ಹಚ್ಚಲಾಗಿದೆ.

--------------------------------------------------------------------------------

೪. ಯಂತ್ರಘೋಷ ಏಳುತ್ತಿರುವ ಬಗೆ ಹೇಗೆ?

ಉತ್ತರ : ನೀಲಿಯಲ್ಲಿ ಹೊಗೆಯನ್ನು ಚೆಲ್ಲುತ್ತಾ ಯಂತ್ರಘೋಷ ಹೇಳುತ್ತಿದೆ.

--------------------------------------------------------------------------------

೫. ನಮ್ಮ ಧ್ವಜವನ್ನು ಎತ್ತಿ ಹಿಡಿದವರು ಯಾರು?.

ಉತ್ತರ : ನಮ್ಮ ಧ್ವಜವನ್ನು ಯೋಧರು ಎತ್ತಿ ಹಿಡಿದಿದ್ದಾರೆ.

--------------------------------------------------------------------------------

೬. ನಮ್ಮ ಪಯಣ ಎತ್ತಸಾಗಿದೆ?

ಉತ್ತರ : ನಮ್ಮ ಪಯಣವು ನಮ್ಮ ಗುರಿಯ ಬೆಳಕಿನೆಡೆಗೆ ಸಾಗಿದೆ.

--------------------------------------------------------------------------------

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಬರೆಯುವುದನ್ನು ರೂಢಿಸಿಕೊಳ್ಳಿ**

| ಹೇಳಿಕೆಗಳು | ಆಯ್ಕೆ | ಸಂದರ್ಭ | ಸ್ವಾರಸ್ಯ |
|---|---|---|---|
| "ಕಣ್ಣು ಬೇರೆ, ನೋಟವೊಂದು" | ಕೆ.ಎಸ್. ನರಸಿಂಹಸ್ವಾಮಿ | ಪರ್ವತ, ಕರಾವಳಿ, ಬಯಲು, ನಗರಗಳು ಕಣ್ಣಿಗೆ ಬೇರೆಯಾಗಿ ಕಂಡರೂ ಎಲ್ಲವೂ ಭಾರತವೇ ಎಂದು ಹೇಳುವಾಗ | ಭಾರತವು ವಿಭಿನ್ನತೆಯಲ್ಲಿ ಏಕತೆ ಹೊಂದಿದೆ ಎಂಬುದು |
| | ಭಾರತೀಯತೆ | ಕೆ.ಎಸ್. ನರಸಿಂಹಸ್ವಾಮಿ ಅವರು ಭಾರತೀಯರಿಗೆ | |
| "ಭಾಷೆ ಬೇರೆ, ಭಾವವೊಂದು" | ಕೆ.ಎಸ್. ನರಸಿಂಹಸ್ವಾಮಿ | ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿರುವ ನಮ್ಮ ಭಾಷೆ ಬೇರೆಯಾಗಿದ್ದರೂ ಭಾವ ಒಂದೇ ಆಗಿರುತ್ತದೆ ಎನ್ನುವ | ಭಾರತವು ವಿಭಿನ್ನತೆಯಲ್ಲಿ ಏಕತೆ ಹೊಂದಿದೆ ಎಂಬುದು |
| | ಭಾರತೀಯತೆ | ಕೆ.ಎಸ್. ನರಸಿಂಹಸ್ವಾಮಿ ಅವರು ಭಾರತೀಯರಿಗೆ | |
| "ಎಲ್ಲೆ ಇರಲಿ, ನಾವು ಒಂದು" | ಕೆ.ಎಸ್. ನರಸಿಂಹಸ್ವಾಮಿ | ಹುತಾತ್ಮರಿಗೆ ಸ್ಮರಿಸುತ್ತ ಕಷ್ಟದಲ್ಲಿದ್ದವರಿಗೆ ಆಶ್ರಯ ನೀಡುತ್ತ ಎಲ್ಲರೂ ಒಂದಾಗಿ ಇರಬೇಕೆಂದು ಹೇಳುವಾಗ | ಭಾರತವು ವಿಭಿನ್ನತೆಯಲ್ಲಿ ಏಕತೆ ಹೊಂದಿದೆ ಎಂಬುದು |
| | ಭಾರತೀಯತೆ | ಕೆ.ಎಸ್. ನರಸಿಂಹಸ್ವಾಮಿ ಅವರು ಭಾರತೀಯರಿಗೆ | |

**ಮೇಲಿನ ಕೋಷ್ಟಕದಲ್ಲಿರುವ ಆಯ್ಕೆ, ಸಂದರ್ಭ, ಸ್ವಾರಸ್ಯಗಳನ್ನು ಕೆಳಗಿನ ಮಾದರಿಯಲ್ಲಿ ಕ್ರಮ ಬದ್ಧವಾಗಿ ಬರೆದು ಅಭ್ಯಾಸ ಮಾಡಿ.**

**ಆಯ್ಕೆ** : ಈ ಮೇಲಿನ ಮಾತನ್ನು ------------------------------------ ಅವರು ಬರೆದಿರುವ ------------------------------------ ಪಾಠದಿಂದ ಆರಿಸಲಾಗಿದೆ.

**ಸಂದರ್ಭ** : ಈ ಮಾತನ್ನು ---------------------------------------- --------- ಸಂದರ್ಭದಲ್ಲಿ ----------------------------------------------------- ಹೇಳಿದರು.

**ಸ್ವಾರಸ್ಯ** : ಈ ಮಾತಿನಲ್ಲಿ --------------------------------------------------------- ------------------------------------------ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

************

**ಘಟಕ ಪರೀಕ್ಷೆ**

**ಪದ್ಯ –೨ ಭಾರತೀಯತೆ.**

ಅಂಕ–10 ಸಮಯ : 20 ನಿಮಿಷ

**ಅ) ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು.** **೩*೧=೩**

೧. ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ?

ಉತ್ತರ:------------------------------------------------------------------------------------

೨. ನಮ್ಮ ಧ್ವಜವನ್ನು ಎತ್ತಿ ಹಿಡಿದವರು ಯಾರು?

ಉತ್ತರ:------------------------------------------------------------------------------------೩. ನಮ್ಮ ಪಯಣ ಎತ್ತ ಸಾಗಿದೆ?

ಉತ್ತರ:------------------------------------------------------------------------------------**ಆ)**

**ಸಂದರ್ಭದೊಡನೆ ವಿವರಿಸಿ.** **೧*೩=೩**

೪. "ಭಾಷೆ ಬೇರೆ, ಭಾವವೊಂದು ".

ಉತ್ತರ:------------------------------------------------------------------------------------

------------------------------------------------------------------------------------

------------------------------------------------------------------------------------

------------------------------------------------------------------------------------

------------------------------------------------------------------------------------

------------------------------------------------------------------------------------

------------------------------------------------------------------------------------

------------------------------------

**ಇ) ೫. ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ .** **೧*೪=೪**

ಉತ್ತರ: ನಾಡಿಗಾಗಿ---------------------------------

---------------------------------------

---------------------------------------

------------------------------ಪಯಣದಲ್ಲಿ.

***********

## ಪಠ್ಯ ಪೂರಕ ಅಧ್ಯಯನ –೨ ಆಹುತಿ

## ಕೊಡಗಿನ ಗೌರಮ್ಮ



**೧. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?**

ಉತ್ತರ : ರೈಲಿನಲ್ಲಿ ಸಿಕ್ಕಿದ ಮುದುಕನು ಒಬ್ಬ ರತ್ನದ ವ್ಯಾಪಾರಿಯಾಗಿದ್ದನು.

**೨. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?**

ಉತ್ತರ : ಯುವಕನ ಕೈಯಲ್ಲಿದ್ದ ಹಣವೆಲ್ಲಾ ಖರ್ಚಾಗಿ ಮುಂದೇನು ಮಾಡಬೇಕೆಂದು ದಿಕ್ಕು ತೋಚದೆ ಮುದುಕನ ಮನೆಗೆ ಹೋದನು.

**೩. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?**

ಉತ್ತರ : ಮುದುಕನ ಮಗಳ ಹೆಸರು ಸೀತೆ ಮತ್ತು ಸೊಸೆಯ ಹೆಸರು ಶಾಂತಿ.

**೪. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿತು?**

ಉತ್ತರ : ವರದಕ್ಷಿಣೆಯ ಪಿಶಾಚಿ ಶಾಂತಿಯನ್ನು ಬಲಿ ತೆಗೆದುಕೊಂಡಿತು.

**೫. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?**

ಉತ್ತರ : ಯುವಕನಿಗೆ ಇಂಗ್ಲೆಂಡಿಗೆ ಹೋಗಿ ಲಾ ಕಲಿತು ಬ್ಯಾರಿಸ್ಟರ್ ಆಗಬೇಕೆಂಬ ಬಲವಾದ ಇಚ್ಛೆ ಇತ್ತು. ಇಂಗ್ಲೆಂಡಿಗೆ ಹೋಗಿ ತುಂಬಾ ಹಣ ಖರ್ಚು ಮಾಡುವಷ್ಟು ಅನುಕೂಲ ಆತನ ತಂದೆಗಿರಲಿಲ್ಲ. ಐಶ್ವರ್ಯವಂತರ ಅಳಿಯನಾದರೆ ತಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದು ಎಂಬ ಕಾರಣದಿಂದ ಅವನು ಆ ಬಡವರ ಹುಡುಗಿಯನ್ನು ಮದುವೆಯಾಗಲ್ಲ.

**೬. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?**

ಉತ್ತರ : ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ–"ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು" ಎಂದು ಹೇಳಿದಳು.

***********



# ಗದ್ಯಪಾಠ –೩ ನೀರು ಕೊಡದ ನಾಡಿನಲ್ಲಿ

## ನೇಮಿಚಂದ್ರ

### ಕೃತಿಕಾರರ ಪರಿಚಯ

**ಶ್ರೀಮತಿ ನೇಮಿಚಂದ್ರ** ಅವರು **ಚಿತ್ರದುರ್ಗ**ದಲ್ಲಿ **ಜುಲೈ ೧೬. ೧೯೪೯** ರಂದು ಜನಿಸಿದರು. ತಂದೆ ಪ್ರೊ.ಜಿ.ಗುಂಡಣ್ಣ, ತಾಯಿ ತಿಮ್ಮಕ್ಕ, ಇವರ ಪ್ರಮುಖ ಕೃತಿಗಳೆಂದರೆ **ಯಾದ್ ವಶೇಮ್–ಕಾದಂಬರಿ , ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಮತ್ತೆ ಬರೆದ ಕಥೆಗಳು, ನೇಮಿಚಂದ್ರರ ಕಥೆಗಳು** ಮುಂತಾದ ಕಥಾ ಸಂಕಲನಗಳು, ಬದುಕು ಬದಲಿಸಬಹುದು ಅಂಕಣ ಬರಹಗಳು ಮೊದಲಾದವುಗಳು. ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ **ಕರ್ನಾಟಕ ಸಾಹಿತ್ಯ ಪ್ರಶಸ್ತಿ, ನೃಪತುಂಗ ಪ್ರಶಸ್ತಿ ಅತ್ತಿಮಬ್ಬೆ** ಪ್ರಶಸ್ತಿಗಳು ದೊರಕಿವೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |

| |
|---|
| |
| |

● **ಪಾಠದ ಆಶಯ**

ವಿಶ್ವದ ಜಾಗತೀಕರಣದ ಹೊಡೆತಕ್ಕೆ ಸಿಲುಕಿದ ನಮ್ಮ ನಗರಗಳಿಂದು ಕೊಳ್ಳುಬಾಕತನವನ್ನು, ಲಾಭಕೋರತನವನ್ನು ಹುಟ್ಟುಹಾಕಿ ವಿಶ್ವದ ಮಾರುಕಟ್ಟೆಯಾಗಲು ಹೊರಟಿರುವುದು ಬಲು ಅಪಾಯಕಾರಿ ಎಂಬ ವೈಚಾರಿಕ ಚಿಂತನೆಯನ್ನು ಹಾಗೂ ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಕಾಪಾಡಿಕೊಳ್ಳುವ ಅನಿವಾರ್ಯತೆಯನ್ನು 'ನೀರು ಕೊಡದ ನಾಡಿನಲ್ಲಿ' ಈ ಗದ್ಯಭಾಗದಲ್ಲಿ ಅತ್ಯುತ್ತಮವಾಗಿ ಚಿತ್ರಿಸಿದೆ.

ಲೇಖಕಿ ಶ್ರೀಮತಿ ನೇಮಿಚಂದ್ರ ಅವರ ಅಂಕಣ ಬರಹವಾದ 'ಬದುಕು ಬದಲಿಸಬಹುದು' ಕೃತಿಯಿಂದ 'ನೀರು ಕೊಡದ ನಾಡಿನಲ್ಲಿ' ಪಾಠವು ಆಧುನಿಕ ಜೀವನಶೈಲಿಗೆ ಹಿಡಿದ ಕೈಗನ್ನಡಿಯಾಗಿದೆ.

- **ಪಾಠದ ಪ್ರಮುಖ ಅಂಶಗಳು**

೧. ಲೇಖಕಿಯರು 'ದೇಶ ಸುತ್ತು ಕೋಶ ಓದು' ಎಂಬ ಗಾದೆಯಂತೆ ಹಲವಾರು ದೇಶಗಳನ್ನು ಸುತ್ತಿದ ಅನುಭವದಿಂದ ಭಾರತದಿಂದ ಹೊರಗೆ ಕಾಲಿಟ್ಟರೇ ಉಳಿದೆಲ್ಲವೂ ನೀರು ಕೊಡದ ನಾಡುಗಳು ಎಂದಿದ್ದಾರೆ.

೨. ವಿದೇಶಗಳಲ್ಲಿನೀರಿಗಿಂತ ಅಗ್ಗವಾಗಿ ಕೋಲಾಗಳು ಸಿಗುತ್ತವೆ. ಅಲ್ಲದೆ ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತದೆ.

೩. ಯುರೋಪಿನಲ್ಲಾಗಲಿ , ಅಮೇರಿಕಾದಲ್ಲಾಗಲಿ ನೀರು ಕೊಡುವ ಸಂಪ್ರದಾಯವಿಲ್ಲ.

೪. ಭಾರತೀಯರಾದ ನಾವು ಮಾನವೀಯತೆಗೆ ಬೆಲೆಕೊಟ್ಟು "ಬಳಲಿ ಬಂದವರಿಗೆ ನೀರು, ಹಸಿದು ಬಂದವರಿಗೆ ಅನ್ನವನ್ನಿಕ್ಕಿ" ಮೌಲ್ಯಯುತ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವುದು ವಿಶ್ವವೇ ಹೆಮ್ಮೆಪಡುವ ಸಂಗತಿಯಾಗಿದೆ.

೫. ಇಂದು ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲೆಡೆ ಹರಡಿ ಭಾರತಕ್ಕೂ ಲಗ್ಗೆ ಇಟ್ಟಿವೆ.

೬. ಮಾನವೀಯ ಮೌಲ್ಯಗಳು ಕೊಳ್ಳುಬಾಕತನದ ಕಪಿಮುಷ್ಠಿಯಿಂದ ಬಿಡಿಸಿಕೊಳ್ಳಬಲ್ಲವೇ? ಬಾಯಾರಿದವರಿಗೆ ನೀರು ಕೊಡಬಲ್ಲವೇ? ಹಸಿದವರಿಗೆ ಅನ್ನ ಕೊಡಬಲ್ಲವೇ? ಇನ್ನೊಬ್ಬರ ನೀರು ಅನ್ನವನ್ನು ಕಸಿದುಕೊಳ್ಳದೆ ಬದುಕಬಲ್ಲವೆ? ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳುವುದು ನಮ್ಮ ಕೈಯಲ್ಲಿದೆ.

**ವಿಶೇಷ ಸೂಚನೆ:** ಇದಲ್ಲದೆ ಮಕ್ಕಳು ಈ ಪದಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರ ಮೂಲಕ ರೂಢಿಸಿಕೊಳ್ಳುವುದು. ಮ್ಯಾಗ್ಡೋನಾಲ್ಡ್, ಫ್ರೇಂಚ್ ಪ್ರೈಸ್, ಸ್ಯಾಂಡ್ವಿಚ್, ಬರ್ಗರ್, ಸ್ಪಾರ್ಕ್ಲಿಂಗ್ ವಾಟರ್, ಮಿನರಲ್ ವಾಟರ್, ಸೈಕಾಲಜಿಕಲ್ ವಾರ್ ಫೇರ್, ಗಿಫ್ಟ್, ಗ್ರೀಟಿಂಗ ಕಾರ್ಡ

**ಚಟುವಟಿಕೆ–೨ : ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.**

| |
|---|
| |
| |

| |
|---|
| |
| |
| |
| |
| |
| |
| |

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು:**

೧. ಎಲ್ಲೆಲ್ಲಿ ನೀರು ಕೊಡುವ  ಸಂಪ್ರದಾಯವಿಲ್ಲ?

ಉತ್ತರ : ಯೂರೋಪ್ ರಾಷ್ಟ್ರಗಳಲ್ಲಿ ಅಮೇರಿಕಾದಲ್ಲಿ ಎಲ್ಲಿಯೂ ನೀರು ಕೊಡುವ ಸಂಪ್ರದಾಯವಿಲ್ಲ.

೨. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ?

ಉತ್ತರ : ಮನೆಗೆ ಬಂದವರಿಗೆ ತಣ್ಣನೆಯ ನೀರು ಕೊಟ್ಟು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ.

೩. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?

ಉತ್ತರ : ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದು ಕೋಲಾ.

೪. ಭಾರತಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ?

ಉತ್ತರ : ಭಾರತದಲ್ಲಿ ಇತ್ತೀಚೆಗೆ ಬಾಟಲಿಯಲ್ಲಿ ನೀರನ್ನು ಕೊಂಡು ಕುಡಿಯುವ ಹುನ್ನಾರ ನಡೆದಿದೆ.

೫. ಸರ್ವರಿಗೂ ವೇದ್ಯವಾಗಿರುವ ಅಂಶಗಳು ಯಾವುವು?

ಉತ್ತರ : ತನ್ನ ತಂಗಿ ಮತ್ತು ಅವಳ ಗೆಳತಿಯರು ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಿದ್ದು ಮತ್ತು ಅಲ್ಲಿ ನಡೆದ ನಿಜ ಸಂಗತಿಯ ಬಗ್ಗೆ ಅವನಿಗೆ ತಿಳಿಯದೆ ತನ್ನ ಹೆಂಡತಿ ತಪ್ಪಿಸಿಕೊಂಡಿದ್ದಾಳೆ ಎಂದು ತಿಳಿದು ಬೇಸರಗೊಂಡು; ಸನ್ಯಾಸಿಯಂತೆ ಬಟ್ಟೆ ತೊಟ್ಟುಕೊಂಡು ದೊರೆ ಮಗನು ದೇಶಾಂತರ ಹೊರಟನು.

೪) ಅರ್ಧಂಬರ್ಧ ದೇಹವಾಗಿದ್ದವಳು ಹೇಗೆ ರಾಣಿಯ ಅರಮನೆ ಸೇರಿದಳು?

ಉತ್ತರ : ಅರ್ಧಂಬರ್ಧ ದೇಹವಾಗಿದ್ದವಳು ತನ್ನ ಗಂಡನ ಅಕ್ಕಳ ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು ಆ ಪಟ್ಟಣದ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದು, ಈ ವಿಚಾರ ರಾಣಿಗೆ ತಿಳಿಸಿ "ಅಮ್ಮ....ಅಮ್ಮ, ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣುತ್ತಾಳೆ" ಎಂದು ಹೇಳಿದರು. ಅದಕ್ಕವಳು "ಅವಳ ಸೇವೆ ಮಾಡಿ ಅನ್ನ ಹಾಕ ಬೇಕಾಗುತ್ತದೆ" ಎಂದು ತಾತ್ಸಾರ ಮಾಡಿದಳು ಆಗ ದಾದೇರು  ನಾವು ಸೇವೆ ಮಾಡುತ್ತೇವೆ ಎಂದು ಗೋಗರೆದು ಒಪ್ಪಿಸಿ ಅವಳನ್ನು ಅರಮನೆಗೆ ಕರೆತಂದರು.

- **ಸಂದರ್ಭದ ಹೇಳಿಕೆಗಳು :**

ಆಯ್ಕೆ : ಈ ವಾಕ್ಯವನ್ನು **ಎ.ಕೆ. ರಾಮಾನುಜನ್** ರವರು ರಚಿಸಿರುವ **ಸಾಲು ಸಂಪಿಗೆ ನೆರಳು** ಕೃತಿಯಿಂದ ಆಯ್ದ **ಹೂವಾದ ಹುಡುಗಿ** ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

| **ಗದ್ಯ** | **ಸಾಂದರ್ಭಿಕ ಪ್ರಶ್ನೆಗಳು** | **ಯಾರು? ಯಾರಿಗೆ?** | **ಸಂದರ್ಭ** |
|---|---|---|---|
| ಹೂವಾದ ಹುಡುಗಿ | ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು | ಹೂವಾದ ಹುಡುಗಿ ತನ್ನ ಅಕ್ಕನಿಗೆ ಹೇಳುತ್ತಾಳೆ | ತಾಯಿಗೆ ಸಹಾಯ ಮಾಡಲು ಹೂವಿನ ಗಿಡವಾಗಿ ಹೂಮಾರಿ ಹಣ ಸಂಪಾದನೆ ಮಾಡುವುದನ್ನು ಮುಚ್ಚಿಡುವಾಗ |
| | ಈ ಸಂಪತ್ತಿಗೆ ನನ್ನ ಮದುವೆ ಆದಿರಿ? | ಹೂವಾದ ಹುಡುಗಿ ದೊರೆ ಮಗನಿಗೆ ಕೇಳುತ್ತಾಳೆ | ರಾಜಕುಮಾರನು ಅವಳೇ ಮೊದಲು ಮಾತಾಡಲಿ ಎಂದು ಮಾತಾಡದೇ ಸುಮ್ಮನೆ ಇದ್ದಾಗ |
| | ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ | ಅರಳೆ ಗಾಡಿಯವನು ಹೂವಾದ ಹುಡುಗಿಗೆ ಹೇಳುತ್ತಾನೆ | ಮೋರಿಯಲ್ಲಿ ನರಳುತ್ತಿರುವ ಹುಡುಗಿಯನ್ನು ಒಂದು ಊರಿನ ಮಂಟಪದಲ್ಲಿ ಬಿಟ್ಟು ಹೋಗುವಾಗ |
| | ಅವಳನ್ನು ನೋಡಿದರೆ ನಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ | ದಾದೇರು ತಮ್ಮ ರಾಣಿಗೆ ಹೇಳುತ್ತಾರೆ | ಹೂವಾದ ಹುಡುಗಿ ಅರ್ಧಂಬರ್ಧ ಮನುಷ್ಯಳಾಗಿ ಪಟ್ಟಣದ ಮಂಟಪದಲ್ಲಿ ಬಿದ್ದಿದ್ದನ್ನು ದಾದೇರು ನೋಡಿದಾಗ |

**ಆಯ್ಕೆ:** ಈ ವಾಕ್ಯವನ್ನು ಕವಿ/ಲೇಖಕರ ಹೆಸರು ಅವರು ಬರೆದ ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು ಪಾಠದಿಂದ ಆರಿಸಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.

**ಸ್ವಾರಸ್ಯ:** ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು/ ಗುಣವನ್ನು ಕುರಿತು ಬರೆಯಬೇಕು.

*****

# ಗದ್ಯ ಪಾಠ ೫– ಹೂವಾದ ಹುಡುಗಿ

## ಘಟಕ ಪರೀಕ್ಷೆ

ಅಂಕಗಳು :೧೦ ಸಮಯ: ೨೦ ನಿಮಿಷಗಳು.

**ಕೊಟ್ಟಿರುವ ಪ್ರತಿಯಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿ ಉತ್ತರವನ್ನು ಆರಿಸಿ ಬರೆಯಿರಿ.** **೨X೧=೦೨**

೧. ಗಣೇಶ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಅ) ರೂಢನಾಮ ಬ) ಅಂಕಿತ ನಾಮ ಕ) ಅನ್ವರ್ಥನಾಮ ಡ) ಗುಣವಾಚಕ

---------------------------------------------------------------------------

೨. ಇದು ಪ್ರಥಮ ಪುರುಷವಾಚಕವಾಗಿದೆ.

ಅ) ನಾನು ಬ) ನಾವ ಕ) ನೀನು ಡ) ಅವನು

---------------------------------------------------------------------------

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೨X ೧=೦೨**

೩. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು ?

---------------------------------------------------------------------------

೪. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು ?

---------------------------------------------------------------------------

**ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರಿಸಿ.** **೨X೨=೦೪**

೫. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು ?

---------------------------------------------------------------------------

---------------------------------------------------------------------------

---------------------------------------------------------------------------

೬. ದೊರೆಯ ಮಗ ದೇಶಾಂತರ ಹೋಗಲು ಕಾರಣವೇನು?

---------------------------------------------------------------------------

---------------------------------------------------------------------------

---------------------------------------------------------------------------

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.** **೧X೨=೦೨**

೭."ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು"

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

## ಪದ್ಯ ಭಾಗ ೫. ಬಹುಮಾನ

**–ಕುವೆಂಪು**



**ಕವಿ ಪರಿಚಯ**

**ಕುವೆಂಪು** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ** ಅವರು **ಸಾ.ಶ .೧೯೦೪** ರಲ್ಲಿ **ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿ** ಎಂಬಲ್ಲಿ ಜನಿಸಿದರು. ಇವರು **ಪಾಂಚಜನ್ಯ, ನನ್ನ ದೇವರು ಮತ್ತು ಇತರ ಕಥೆಗಳು, ಸನ್ಯಾಸಿ ಮತ್ತು ಇತರ ಕಥೆಗಳು, ಪಕ್ಷಿಕಾಶಿ, ನೆನಪಿನ ದೋಣಿಯಲ್ಲಿ, ಶ್ರೀ ರಾಮಾಯಣ ದರ್ಶನಂ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ಭಾರತೀಯ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ** ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |

- **ಪದ್ಯ ಭಾಗದ ಪ್ರಮುಖಾಂಶಗಳು**

೧. ಕುವೆಂಪು ಅವರ ಈ ಪುಟ್ಟ ಕವಿತೆಯು ಒಂದು ಸುಂದರವಾದ ಚಿತ್ರವನ್ನು ನಮಗೆ ಕಟ್ಟಿಕೊಡುತ್ತದೆ.

೨. ಹಕ್ಕಿಯೊಂದು  ಹಾಡುತ್ತಿದೆ. ಅದನ್ನು ಕೇಳಿದ ವ್ಯಕ್ತಿ "ನೀನು ಇಂಗ್ಲೀಷಿನಲ್ಲಿ ಹಾಡಿದರೆ ನೊಬೆಲ್ ಪ್ರಶಸ್ತಿ ಬಂದೀತೆಂದು" ಹೇಳುತ್ತಾನೆ.

೩. ಆದರೆ ಆ ಮಾತಿಗೆ ಕೋಗಿಲೆ ಯಾವ ಪ್ರತಿಕ್ರಿಯೆಯನ್ನು ಕೊಡದೆ ಮತ್ತೊಮ್ಮೆ 'ಕುಹೂ' ಎಂದಷ್ಟೇ ಹೇಳುತ್ತದೆ.

೪. ಆದರೆ ಆ ಧ್ವನಿಯು ಇಡೀ ಪ್ರಕೃತಿಯಲ್ಲಿ ಒಂದು ಸಂಚಲನವನ್ನು ಸೃಷ್ಟಿಸುತ್ತದೆ.

೫. ನಾವು ಯಾವ ಕೆಲಸದಲ್ಲಿ ಪರಿಣತರು ಅದನ್ನು ಅತ್ಯಂತ ನಿಸ್ವಾರ್ಥದಿಂದ ಪ್ರಾಮಾಣಿಕತೆಯಿಂದ ಮಾಡಬೇಕು ಎಂಬುದು ಈ ಕವಿತೆ ಒಂದು ಧ್ವನಿ.

೬. ಲೋಕದ ಟೀಕೆ ಟಿಪ್ಪಣಿಗಳಿಗೆ ನಾವು ತಲೆಕಡಿಸಿಕೊಳ್ಳಬಾರದು ಎಂಬ ಧ್ವನಿಯು ಹೊರಡುತ್ತದೆ.

೭. ನಮ್ಮ ಅಭಿವೃದ್ಧಿಯನ್ನು ನಮ್ಮ ಸಹಜಭಾಷೆ, ಮಾತೃಭಾಷೆ, ಆಡುನುಡಿಯಲ್ಲಿ ಮಾಡಿದರೆ ಅದು ಜೀವಂತಿಕೆಯಿಂದ ಕೂಡಿರುತ್ತದೆ.

೮. ಅನ್ಯ ಭಾಷೆಯಲ್ಲಿ ಅಭಿವ್ಯಕ್ತಿ ಎಷ್ಟೆಂದರೂ ಕೃತಕ ಎಂಬ ಭಾವವು ಕವಿತೆಯಿಂದ ಹೊಮ್ಮುವುದು.

ಚಟುವಟಿಕೆ–೨ : ಈ ಮೇಲಿನ ವಾಕ್ಯಗಳನ್ನು ಅಭ್ಯಾಸ ಮಾಡಿ ವಾಕ್ಯರೂಪದಲ್ಲಿ ಬರೆಯಿರಿ.

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು**

೧. ಜಗತ್ತು ಜುಮ್ಮೆಂದುದು ಯಾವ ಧ್ವನಿಗೆ?

ಉತ್ತರ:- ಜಗತ್ತು ಜುಮ್ಮೆಂದುದು ಕೋಗಿಲೆಯ ಮಧುರ ಧ್ವನಿಗೆ.

---

೨. ಕೋಗಿಲೆಯ ಕೂಗನ್ನು ಯಾವುದು ಮಾರ್ದನಿಸಿತು?

ಉತ್ತರ:- ಕೋಗಿಲೆಯ ಕೂಗನ್ನು ಮೌನವಾಗಿ ನಿಂತಿರುವ ಕಾಡು-ಪರ್ವತಗಳು ಮಾರ್ದನಿಸಿತು.

---

೩. ಗಾನವನ್ನು ಕೇಳಿದ ನೀಲಾಕಾಶ ಏನು ಮಾಡಿತು?

ಉತ್ತರ:-ಗಾನವನ್ನುಕೇಳಿದ ನೀಲಾಕಾಶ ಮಾತನಾಡದೆ ಕೋಗಿಲೆಯ ಧ್ವನಿಯ ಮಾಧುರ್ಯವನ್ನು ಬಣ್ಣಿಸುತ್ತಿತ್ತು.

---

೪. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ಹೇಗೆ ಪ್ರತಿಕ್ರಿಯೆ ಕೊಟ್ಟಿತು?

ಉತ್ತರ:- ಕಣಿವೆಯಲ್ಲಿದ್ದ ಸರೋವರ ತೆರೆಗಳ ರೂಪದಲ್ಲಿ ಚಪ್ಪಾಳೆ ಹಾಕಿತು.

---

೬ ಕೋಗಿಲೆ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?

ಉತ್ತರ:- ಕೋಗಿಲೆ ಕೂಗನ್ನು ಆಲಿಸಿದ ಮನುಷ್ಯ 'ಇಂಗ್ಲಿಷ್'ಗೆ ಅದನ್ನು ಅನುವಾದ ಮಾಡಿದರೆ ನೊಬೆಲ್ ಬಹುಮಾನ ದೊರೆಯುವುದು ಎಂದನು.

---

---

೭. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು?

ಉತ್ತರ:- ಯಾವುದೇ ಪ್ರತಿಫಲವನ್ನು ಬಯಸದ ಕೋಗಿಲೆ"ಕುಹೂ! ಕುಹೂ"ಎಂದು ಹಾಡುತಿತ್ತು.

---

- **ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

೧.ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?

ಉತ್ತರ:- ಮೌನವಾಗಿ ನಿಂತಿರುವ ಪರ್ವತ ಕಾಡುಗಳ ಸಾಲು ಕೋಗಿಲೆಯ ಧ್ವನಿಯಿಂದ ಸಂತೋಷಗೊಂಡು ಧ್ವನಿಯನ್ನು ಪ್ರತಿಧ್ವನಿ ಮಾಡಿತು. ವಿಶಾಲವಾದ ಆಕಾಶ ಸುಮ್ಮನೆ ಮಾತನಾಡದೆ ಕೋಗಿಲೆಯ ಧ್ವನಿಯ ಮಾಧುರ್ಯವನ್ನು ಬಣ್ಣಿಸುತ್ತಿತ್ತು. ಪರ್ವತಗಳ ನಡುವಿನ ಆಳದಲ್ಲಿರುವ ಸರೋವರವು ತೆರೆಗಳ ರೂಪದಲ್ಲಿ ಚಪ್ಪಾಳೆ ಹಾಕಿತು.ಹೀಗೆ ಕೋಗಿಲೆಯ ಕಾಣಿಕೆ ಪ್ರಕೃತಿ ಸ್ಪಂದಿಸಿತು.

---

೨. ಕೋಗಿಲೆ ಗಾನವನ್ನು ಆಲಿಸಿ ನೊಂದು ಮನುಷ್ಯನು ಏನೆಂದನು?

ಉತ್ತರ:– ಕೋಗಿಲೆ ಗಾನವನ್ನು ಆಲಿಸಿ ನೊಂದು ಮನುಷ್ಯನು "ಬೆಟ್ಟಗಳಲ್ಲಿ ಹಾಡುವ ಓ ಕೋಗಿಲೆಯೇ, ನಿನ್ನ ಹಾಡು ಬಹಳ ಚೆನ್ನಾಗಿದೆ. ಇಂಗ್ಲೀಷ್ ಗೆ ಅದನ್ನು ಅನುವಾದ ಮಾಡಿದರೆ ನೊಬೆಲ್ ಬಹುಮಾನ ದೊರೆಯುವುದು. ಸುಮ್ಮನೆ ಯಾರು ಕಿವಿಗೂ ಬೀಳದಂತೆ ಯಾಕೆ ಹಾಡುತ್ತಿರುವೆ. ನಿನ್ನ ಹಾಡನ್ನು ಕೇಳುವವರು ಯಾರಿದ್ದಾರೆ ಇಲ್ಲಿ?" ಎಂದನು.

೩. ಮನುಷ್ಯನ ಮಾತಿಗೆ ಕೋಗಿಲೆಯು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿತು?

ಉತ್ತರ:–"ಸುಮ್ಮನೆ ಯಾರದ್ದು ಹೀಗೂ ಬೀಳದಂತೆ, ಯಾಕೆ ಹಾಡುತ್ತಿರುವೆ, ನಿನ್ನ ಹಾಡುನ್ನು ಕೇಳುವವರು ಯಾರಿದ್ದಾರೆ ಇಲ್ಲಿ" ಎಂದು ಮನುಷ್ಯನ ಹೇಳಿದರು ಯಾವುದೇ ಪ್ರತಿಫಲವನ್ನು ಬಯಸದ ಕೋಗಿಲೆ "ಕುಹೂ! ಕುಹೂ!" ಎಂದು ಹಾಡುತಿತ್ತು.

- **ಸಂದರ್ಭದ ಹೇಳಿಕೆಗಳು**

ಆಯ್ಕೆ:- ಈ ವಾಕ್ಯವನ್ನು **ಕುವೆಂಪು**ರವರು ರಚಿಸಿರುವ **'ನವಿಲು'** ಎಂಬ ಕವನ ಸಂಕಲನದಿಂದ ಆಯ್ದ **'ಬಹುಮಾನ'** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

| **ಪದ್ಯ** | **ಸಾಂಧರ್ಭಿಕ ಪ್ರಶ್ನೆಗಳು** | **ಯಾರು ಯಾರಿಗೆ** | **ಸಂದರ್ಭ** |
|---|---|---|---|
| ಬಹುಮಾನ | "ಮರುದನಿಗೈದಿತು ಮುದತಾಳಿ | ಕವಿ ಸಹೃದಯರಿಗೆ | ಕೋಗಿಲೆ ಹಾಡಿಗೆ ಪರ್ವತ ಕಾಡುಗಳ ಸಾಲು ಪ್ರತಿಕ್ರಿಯೆ ನೀಡುವ ಸಂದರ್ಭದಲ್ಲಿ |
| ಬಹುಮಾನ | "ಬಲು ಚೆಲುವಿದೆ ನಿನ್ನೀಗಾನ" | ಕವಿಸಹೃದಯರಿಗೆ | ಕೋಗಿಲೆ ಗಾನ ಕೇಳಿದಾಗ ಮನುಷ್ಯನ ಪ್ರತಿಕ್ರಿಯೆ ಏನಾಗಿತ್ತೆಂದು ಹೇಳುವಾಗ |
| ಬಹುಮಾನ | "ಅರಣ್ಯರೋಧನ! ಸುಮ್ಮನೆ ಹಾಡವೆ"! | ಕವಿಸಹೃದಯರಿಗೆ | ಸುಮ್ಮನೆ ಯಾರಕಿವಿಗೆ ಬೀಳದಂತೆ ಯಾಕೆ ಹಾಡುತ್ತಿರುವೆ ಎಂದು ಹೇಳುವ ಸಂದರ್ಭ |
| ಬಹುಮಾನ | "ತಲ್ಲಣಿಸಿತು ಜಗ ಜುಮ್ಮೆಂದು" | ಕವಿ ಸಹೃದಯರಿಗೆ | ಕೋಗಿಲೆಯ ಧ್ವನಿಗೆ ಜಗತ್ತಿನ ಪ್ರತಿಕ್ರಿಯೆ ಏನಾಗಿತ್ತೆಂದು ಹೇಳುವ ಸಂದರ್ಭ |

- **ಈ ಕೆಳಗಿನ ಮಾದರಿಯಲ್ಲಿ ಸಂದರ್ಭಗಳನ್ನು ಬರೆಯಿಸಿ ರೂಢಿಸುವುದು.**

| |
|---|
| **ಆಯ್ಕೆ :-** ಈ ವಾಕ್ಯವನ್ನು ಕವಿ ಲೇಖಕರ ಹೆಸರು ಅವರು ಬರೆದ ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದಹೆಸರು ಪಾಠದಿಂದಆರಿಸಿಕೊಳ್ಳಲಾಗಿದೆ. |
| **ಸಂಧರ್ಭ:-** ಈ ಮಾತನ್ನು ಯಾರು , ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು. |
| **ಸ್ವಾರಸ್ಯ:-** ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು /ಗುಣವನ್ನು ಕುರಿತು ಬರೆಯಬೇಕು. |

****

## ಪದ್ಯಪಾಠ ೫– ಬಹುಮಾನ

## ಘಟಕ ಪರೀಕ್ಷೆ

ಅಂಕಗಳು : ೧೦ ಸಮಯ : ೨೦ ನಿಮಿಷ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿ** **೨ x ೧ = ೨**

೧) ಕೋಗಿಲೆಯ ಕೂಗನ್ನು ಯಾವುದು ಮಾರ್ದನಿಸಿತು?

________________________________________________

೨) ಕೋಗಿಲೆ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?

________________________________________________

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ** **೧ x ೨ = ೨**

೩) ಮನುಷ್ಯನ ಮಾತಿಗೆ ಕೋಗಿಲೆಯು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿತು?

________________________________________________

________________________________________________

________________________________________________

________________________________________________

**ಇ) ಈ ಕೆಳಗಿನಲ್ಲಿ ಕೊಟ್ಟಿರುವ ಕವಿಯ ಪರಿಚಯ ತಿಳಿಸಿ.** **೧ x ೩ = ೩**

೪) ಕುವೆಂಪು

________________________________________________

________________________________________________

________________________________________________

________________________________________________

________________________________________________

**ಈ) ಕೊಟ್ಟಿರುವ ಪ್ರಶ್ನೆಗಳಿಗೆ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ.** **೧ x ೩ = ೩**

೫) " ತಲ್ಲಣಿಸಿತು ಜಗ ಜುಮ್ಮೆಂದು"

________________________________________________

________________________________________________

________________________________________________

________________________________________________

________________________________________________

________________________________________________

________________________________________________

****

## ಪಠ್ಯಪೂರಕ ಅಧ್ಯಯನ – ೪



## ಕಟ್ಟುವೆವು ನಾವು

**– ಎಂ. ಗೋಪಾಲಕೃಷ್ಣ ಅಡಿಗರು**

**೧. ಯಾವುದು ಬತ್ತಿ ಹೋಗುವ ಮುನ್ನ ಹೊಸ ನಾಡೊಂದನ್ನು ಕಟ್ಟಬೇಕು?**

ಉತ್ತರ: ಕನ್ನಡ ನಾಡನ್ನು ಕಟ್ಟುವ ಉತ್ಸಾಹ ಸಾಹಸಗಳ ಅಲೆಗಳಿಂದ ಅಲ್ಲೋಲಕಲ್ಲೋಲವಾದ ಸಾಗರವು ಬತ್ತಿ ಹೋಗುವ ಮುನ್ನ ಹೊಸ ನಾಡೊಂದನ್ನು ಕಟ್ಟಬೇಕು.

**೨. ನಮ್ಮೆದೆಯ ಕಾಮಧೇನು ಯಾವುದು?**

ಉತ್ತರ: ನಮ್ಮ ಕನಸುಗಳೇ ನಮ್ಮೆದೆಯ ಕಾಮಧೇನು.

**೩. ನಮ್ಮ ಸುತ್ತಲೂ ಇರುವ ಕಂದಕಗಳಾವುವು?**

ಉತ್ತರ: ನಮ್ಮ ಸುತ್ತಲೂ ಜಾತಿ ಮತ ಭೇದಗಳ ಕಂದಕಗಳಿವೆ.

**೪. ಕೋಟೆ ಗೋಡೆಗೆ ಮೆಟ್ಟಿಲುಗಳು ಯಾವುವು?**

ಉತ್ತರ: ನಮ್ಮ ಹೆಣಗಳೇ ಕೋಟೆ ಗೋಡೆಗೆ ಮೆಟ್ಟಿಲುಗಳು.

**೫. ಕವಿ ಯಾರಿಗೆ ವೀಳೆಯವನು ಕೊಡುವೆನೆಂದಿದ್ದಾರೆ?**

ಉತ್ತರ: ಹೊಸ ನಾಡು ಕಟ್ಟುವುದನ್ನು ತಡೆಯುವವರು, ಹೊಡೆಯುವವರು, ಕೆಟ್ಟದ್ದನ್ನು ಮಾತನಾಡುವವರು, ಕೆಡುಕನ್ನು ಬಯಸುವ ಜನರಿಗೆ ವೀಳೆಯವನು ಕೊಡುವೆನೆಂದು ಕವಿ ಹೇಳಿದ್ದಾರೆ.

**೬. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?**

ಉತ್ತರ: "ಎಲ್ಲರೂ ಒಗ್ಗಟ್ಟಾಗಿ ಹೊಸ ನಾಡನ್ನು ಕಟ್ಟುವೆವು. ಉತ್ಸಾಹ ಉದ್ವೇಗ ಉದ್ರೇಕಗಳ ವೀರ ಯುವ ಜನರೇ ನಾಡ ಬಾವುಟವು. ಆ ಬಾವುಟದ ಹಾರಾಟಕ್ಕೆ ಆಕಾಶವೇ ಗಡಿ. ಅದರ ಹಾರಾಟವನ್ನು ತಡೆಯುವಂತಹ ಯಾವುದೇ ಶಕ್ತಿಯನ್ನು ಬರಲು ಬಿಡುವುದಿಲ್ಲ. ಅದನ್ನು ತಡೆಯುವವರು, ಹೊಡೆಯುವವರು, ಕೆಡೆ ನುಡಿಯುವ, ಕೆಡೆ ಬಗೆಯುವ ಕೆಡಕು ಜನರೇ ಬನ್ನಿರಿ ನಿಮಗಿದು ಹೋರಾಟದ ವೀಳೆಯವನು ಕೊಡುತ್ತಿರುವೆವು. ನಿಮ್ಮೆಲ್ಲರನ್ನು ನಾಶ ಮಾಡಿ ನಿಮ್ಮ ಮಸಣದ ಮೇಲೆ ಭವ್ಯವಾದ ಸುಖದ ನಾಡೊಂದನ್ನು ಕಟ್ಟುತ್ತೇವೆ" ಎಂದು ಕವಿಯು ಹೇಳುತ್ತಾರೆ.

**೭. ಹೊಸ ನಾಡ ತೊಟ್ಟಿಲು ಯಾವುದು?**

ನಮ್ಮ ಸಾವೇ ನೋವೇ ಹೊಸ ನಾಡ ತೊಟ್ಟಿಲು.

**೮. ಕವಿ ವೀರನಿಗೆ ಯಾವುದು ಸಲ್ಲುವುದಿಲ್ಲವೆಂದಿದ್ದಾರೆ?**

ಕವಿ ಸೋಲುವ ಮನಸ್ಸು ವೀರನಿಗೆ ಸಲ್ಲುವುದಿಲ್ಲವೆಂದಿದ್ದಾರೆ.

***

## ಗದ್ಯ ಭಾಗ– ೬. ತಲಕಾಡಿನ ವೈಭವ

### –ಹಿರೇಮಲ್ಲೂರು ಈಶ್ವರನ್



- **ಕೃತಿಕಾರರ ಪರಿಚಯ**

ಅಂತರಾಷ್ಟ್ರೀಯ ಪುರಸ್ಕೃತ ಸಾಹಿತಿಯಾದ **ಹಿರೇಮಲ್ಲೂರು ಈಶ್ವರನ್** ಇವರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಹಿರೇಮಲ್ಲೂರಿನಲ್ಲಿ ಸಾ.ಶ ೧೯೨೨ ರಲ್ಲಿ ಜನಿಸಿದರು.

ಸಮಾಜಶಾಸ್ತ್ರಜ್ಞರಾದ ಇವರು ಸಮಾಜಶಾಸ್ತ್ರ ಪ್ರಾಧ್ಯಾಪಕರೂ ಆದವರು ಇವರಿಂದ ರಚನೆಯಾದ ಕೃತಿಗಳಂದರೆ, **'ಕವಿ ಕಂಡ ನಾಡು', 'ವಿಷ ನಿಮಿಷಗಳು', 'ಭಾರತದ ಹಳ್ಳಿಗಳು', 'ವಲಸೆ ಹೋದ ಕನ್ನಡಿಗನ ಕತೆ', 'ಹಾಲಾಹಲ', 'ರಾಜ ರಾಣಿ ದೇಖೋ', 'ಶಿವನ ಬುಟ್ಟಿ', 'ತಾಯಿ ನೋಟ'** ಮುಂತಾದವು. ಇವರು ಗೌರವ ಡಾಕ್ಟರೇಟ್ ಪದವಿ ಅಲ್ಲದೆ ಅಂತರಾಷ್ಟ್ರೀಯ ಪುರಸ್ಕಾರವನ್ನು ಪಡೆದಿದ್ದಾರೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |

- **<u>ಗದ್ಯ ಭಾಗದ ಪ್ರಮುಖಾಂಶಗಳು</u>**

೧. ಪ್ರವಾಸದಿಂದ ಧಾರ್ಮಿಕ ಭಾವನೆ, ಪ್ರಕೃತಿ ವೀಕ್ಷಣೆ, ಶೈಕ್ಷಣಿಕ ಅರಿವು, ಮನೋರಂಜನೆ ಮುಂತಾದ ಉದ್ದೇಶಗಳು ಈಡೇರುವುವು.

೨. ೧೯೫೦ನೆಯ ಇಸವಿ ಅಕ್ಟೋಬರ್ ತಿಂಗಳು ೨೦ನೆಯ ತಾರೀಕು ಮಂಗಳವಾರ ಶಿವನಸಮುದ್ರದ ನಿಲ್ಮನೆಯಲ್ಲಿ ರಾತ್ರಿ ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ಎಂದು ಹೇಳುತ್ತಾ ಬರೆಯುವುದು ವಿಶೇಷ.

೩. ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ ಜೈನ ಧರ್ಮದ ವಿವರಣೆ ಇದೆ ಕನ್ನಡ ಸಾಹಿತ್ಯದ ಕಥನವಿದೆ ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ.

೪. ಚಾವುಂಡರಾಯ 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ಮೂರು ಪುಣ್ಯ ಪುರುಷರ ಚರಿತ್ರೆಯನ್ನು ಕನ್ನಡಕ್ಕೆ ಕಾಣಿಕೆಯಾಗಿ ನೀಡಿದ.

೫. ಹತ್ತನೇ ಶತಮಾನದ ಕೊನೆಯ ಭಾಗದಲ್ಲಿ ಬಳೆ ಮಾರುವ ಉದ್ಯಮವನ್ನು ಕೃಷ್ಣತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನನು ಬಂದನು. ಇಲ್ಲಿ ಅತ್ತಿಮಬ್ಬೆ ಇದ್ದಾಳೆ, ಅಜಿತ ಸೇನಾ ಗುರುಗಳ ಶಿಷ್ಯ ವೃಂದವಿದೆ ಅದು ಕಲಾ ಶ್ರೀ ವಿಹರಿಸುವ ನಂದನವನ.

೬. ಚೋಳರು ಗುಡಿ ಗೋಪುರಗಳನ್ನು ರಾಜೇಶ್ವರ, ವೈಕುಂಠ ನಾರಾಯಣ, ಮರುಳೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ ಗುಡಿಗಳನ್ನು ಕಟ್ಟಿಸಿದರು.

೭. ವಿಷ್ಣುವರ್ಧನ ದೇವ ಆದಿಯಮನನ್ನು ಸೋಲಿಸಿ ತಲಕಾಡನ್ನು ಗೆದ್ದುಕೊಂಡ ನೆನಪಿಗಾಗಿ ವೀರನಾರಾಯಣನ ಹೆಸರಿನಲ್ಲಿ ಗುಡಿ ಕಟ್ಟಿದನು.

೮. ವಿಜಯಪುರದ ಅರ್ಕೇಶ್ವರ ದೇವಸ್ಥಾನ ಸಿಗದೇ ನಿರಾಶೆ ಮೂಡುವುದೇನೋ ಎಂದಿದ್ದ ಲೇಖಕರಿಗೆ ಕೊನೆಗೂ ಅರ್ಕೇಶ್ವರ ದೇವಾಲಯ ಲೇಖಕರಿಗೆ ದೊರಕೆ ಬಿಟ್ಟಿತು.

೯. ಹೊಯ್ಸಳರ ಬಲ್ಲಾಳನ ಅಭಿಮಾನದ ಕಲಾಸಂಪದವಾಗಿ ನಿಂತಿರುವ ಅನರ್ಘ್ಯ ವಾಸ್ತುಶಿಲ್ಪ ಕಲರತ್ನ ಸೋಮನಾಥ ದೇವಾಲಯ.

೧೦.ಹೊಯ್ಸಳ ಬಲ್ಲಾಳರು ಕನ್ನಡದ ಕುಲದೀಪಕರು ಮೂರು ನೂರು ವರ್ಷಗಳ ಪರ್ಯಂತ ಕನ್ನಡದ ನಂದಾದೇವಿಗೆಯನ್ನು ಹಚ್ಚಿ ನಾಡು ನುಡಿಯನ್ನು ಸಂರಕ್ಷಿಸಿದವರು.

೧೧.ನಮ್ಮ ದೇಗುಲಗಳೇ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು.

ಅಭ್ಯಾಸ ಹಾಳೆ

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

**ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರ**ಗಳು

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?

ಉತ್ತರ:– ಲೇಖಕರು ಪ್ರವಾಸದ ವಿವರವನ್ನು ಶಿವನಸಮುದ್ರದಲ್ಲಿ ಬರೆಯಲು ಆರಂಭಿಸಿದರು.

೨. ಗಂಗರ ಮೊದಲ ರಾಜಧಾನಿ ಯಾವುದು?

ಉತ್ತರ:– ಗಂಗರ ಮೊದಲ ರಾಜಧಾನಿ ಕೋಲಾರ.

೩. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?

ಉತ್ತರ:– ಚಾವುಂಡರಾಯನನ್ನು 'ರಾಯ', 'ಅಣ್ಣ' ಎಂದು ಕರೆಯುತ್ತಿದ್ದರು.

೪. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?

ಉತ್ತರ:– ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ಮೂರು ಪುಣ್ಯ ಪುರುಷರ ಚರಿತ್ರೆ.

೬. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?

ಉತ್ತರ:– ವಿಷ್ಣುವರ್ಧನನು ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಸೋಲಿಸಿ ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿ ಕಟ್ಟಿದನು.

೭. ರಾಷ್ಟ್ರದ ಚಾರಿತ್ರದ ಹೆಗ್ಗುರುತು ಯಾವುದು?

ಉತ್ತರ:– ನಮ್ಮ ದೇವಾಲಯಗಳೇ ನಮ್ಮ ರಾಷ್ಟ್ರದ ಚಾರಿತ್ರದ ಹೆಗ್ಗುರುತುಗಳು.

- **ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

**೧. ಗಂಗರ ಇತಿಹಾಸದ ವಿಶೇಷತೆಯೇನು?**

ಉತ್ತರ:– ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. ೫೦೦ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು. ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಚಾವುಂಡರಾಯನು ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿಯಾಗಿದ್ದನು. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಸ್ವತಃ ಕವಿಯಾಗಿದ್ದ ಅವನು 'ಚಾವುಂಡರಾಯ ಪುರಾಣ' ಕೃತಿ ರಚಿಸಿದ್ದಾನೆ. ಹಾಗೆಯೇ ಮಹಾಕವಿ ರನ್ನನು ಚಾವುಂಡರಾಯ ಮತ್ತು ಅತ್ತಿಮಬ್ಬೆಯ ಆಶ್ರಯ ಪಡೆದಿದ್ದನು.

ಉತ್ತರ:–

**೨. ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳಾವುವು? ವಿವರಿಸಿ.**

ವೈದ್ಯಶ್ವರ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ನಿರ್ಧರಿಸಲಾಗಿದೆ. ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ

ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ಣಯಿಸುವುವು.

ಉತ್ತರ:–

**೩ . ಲೇಖಕರು 'ಯುರೇಕಾ' ಎಂದು ಕೂಗಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಲೇಖಕರು ವಾಹನ ಚಾಲಕನೊಡನೆ ಅರ್ಕೇಶ್ವರ ದೇವಾಲಯವನ್ನು ಹುಡುಕುತ್ತಾ ಹೊರಟರು. ಆಗ ರಾತ್ರಿ ಒಂದು ಗಂಟೆ. ಎಡಬಲಕ್ಕೆ ಭತ್ತದ ಗದ್ದೆಗಳು, ನರಿಗಳು ಕೂಗುತ್ತಲಿದ್ದವು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಗಿಡ ಮರಗಳ ಪೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ಅವರ ಎದೆ ಜೋರಿನಿಂದ ಹಾರತೊಡಗಿತು. ಹತ್ತಿರ ಸಮೀಪಿಸಿದರು. ಅವರು ದೇವಾಲಯವನ್ನು ಕಂಡು ಹಿಡಿದ ಸಂತೋಷದಲ್ಲಿ ಆವೇಶದಿಂದ "ಯುರೇಕಾ! ಯುರೇಕಾ!" ಎಂದು ಅವರ ಸ್ನೇಹಿತರಿಗೆ ಕೇಳುವಂತೆ ಕಿರುಚುತ್ತಾ "ಬರೋ ಗುಡಿ ಸಿಕ್ಕಿತು. ಬರೋ ದೇವಾಲಯ ದೊರೆಯಿತು" ಎಂದು ಕೂಗಿದರು. ಅವರೆಲ್ಲಾ ಬಂದು ಇವರೊಡನೆ ಅರ್ಕೇಶ್ವರ ದೇವರ ಗುಡಿಯನ್ನು ನೋಡಿದರು.

ಉತ್ತರ:–

**೪. ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?**

ಹೊಯ್ಸಳ ವಂಶದ ಮೂಲಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮಸ್ಥಳ. ಆಗಿನ ಸೊಸೆವೂರಿಗೆ ಈಗ 'ಅಂಗಡಿ' ಎಂದು ಕರೆಯುತ್ತಾರೆ. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳನು ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಿದ್ದಾಗ ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ "ಹೊಯ್ಸಳ" ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದನೆಂದೂ ದಂತಕಥೆ ಇದೆ. ಅದರಂತೆ ಅಂದಿನಿಂದ ಸಳನ ಮನೆತನಕ್ಕೆ 'ಹೊಯ್ಸಳ' ಎಂಬ ಹೆಸರು ಬಂದಿತು.

ಉತ್ತರ:–

* **ಸಂದರ್ಭದ ಹೇಳಿಕೆಗಳು**

**ಆಯ್ಕೆ:–** ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ರವರು ರಚಿಸಿರುವ 'ಕವಿಕಂಡ ನಾಡು' ಎಂಬ ಪ್ರವಾಸ ಕಥನದಿಂದ ಆರಿಸಿದ 'ತಲಕಾಡಿನ ವೈಭವ' ಎಂಬ ಗದ್ಯ ಭಾಗದಿಂದ ಆರಿಸಲಾಗಿದೆ.

| ಗದ್ಯ | ಸಾಂಧರ್ಭಿಕ ಪ್ರಶ್ನೆಗಳು | ಯಾರು ಯಾರಿಗೆ | ಸಂದರ್ಭ |
|---|---|---|---|
| 'ತಲಕಾಡಿನ ವೈಭವ' | "ಸುತ್ತಣ್ಣ ಲೋಕವೆಲ್ಲ ಮಲಗಿಕೊಂಡಿದೆ". | ಲೇಖಕರು ತಮ್ಮ ಅಭಿಪ್ರಾಯ ಓದುಗರಿಗೆ | ಲೇಖಕರು ಶಿವನಸಮುದ್ರದ ನಿರ್ಮನೆಯಲ್ಲಿ ತಂಗಿದ್ದಾಗ ಅಂದಿನ ಪ್ರವಾಸದ ವಿವರವನ್ನು ಬರೆಯಲು ಪ್ರಾರಂಭಿಸುವ ಸಂದರ್ಭದಲ್ಲಿ |
| 'ತಲಕಾಡಿನ ವೈಭವ' | "ಅದು ಕಲಾಶ್ರೀ ವಿಹರಿಸುವ ನಂದನವನ". | ಲೇಖಕರು ತಮ್ಮ ಅಭಿಪ್ರಾಯ ಓದುಗರಿಗೆ | ಲೇಖಕರು ಗಂಗರ ಇತಿಹಾಸದ ಬಗ್ಗೆ ವಿವರಿಸುವ ಸಂದರ್ಭದಲ್ಲಿ |
| 'ತಲಕಾಡಿನ ವೈಭವ' | "ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು". | ಲೇಖಕರು ತಮ್ಮ ಅಭಿಪ್ರಾಯ ಓದುಗರಿಗೆ | ಲೇಖಕರು ಅರ್ಕೇಶ್ವರನ ದರ್ಶನ ಒಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ಕೊರಕಲು ದಾರಿಯಲ್ಲಿ ಹೋಗುತ್ತಿದ್ದ ಸಂದರ್ಭ |
| 'ತಲಕಾಡಿನ ವೈಭವ' | ಬರ್ರೋ ಗುಡಿ ಸಿಕ್ಕಿತು ಬರ್ರೋ ದೇವಾಲಯ ದೊರಕಿತು" | ಲೇಖಕರು ಸ್ನೇಹಿತರಿಗೆ | ಅರ್ಕೇಶ್ವರ ದೇವಾಲಯ ಕಾಣದೇ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಎಂಬ ಕೊರಗಿನಲ್ಲಿ ಲೇಖಕರು ಹುಡುಕುತ್ತಾ ಹೋದಂತೆ ಅವರಿಗೆ ಗುಡಿಸಿಕ್ಕ ಸಂದರ್ಭದಲ್ಲಿ. |

**ಈ ಕೆಳಗಿನ ಮಾದರಿಯಲ್ಲಿ ಸಂದರ್ಭಗಳನ್ನು ಬರೆಯಿಸಿ ರೂಢಿಸುವುದು.**

| |
|---|
| **ಆಯ್ಕೆ :–** ಈ ವಾಕ್ಯವನ್ನು ಕವಿ /ಲೇಖಕರ ಹೆಸರು ಅವರು ಬರೆದ ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದಹೆಸರು ಪಾಠದಿಂದ ಆರಿಸಿಕೊಳ್ಳಲಾಗಿದೆ. |
| ಸಂದರ್ಭ:– ಈ ಮಾತನ್ನು ಯಾರು , ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು. |
| |
| |
| |
| |
| ಸ್ವಾರಸ್ಯ:– ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು /ಗುಣವನ್ನು ಕುರಿತು ಬರೆಯಬೇಕು. |
| |

*****

## ಗದ್ಯ ಪಾಠ ೬– ತಲಕಾಡಿನ ವೈಭವ

## ಘಟಕ ಪರೀಕ್ಷೆ

ಅಂಕಗಳು :೧೦ ಸಮಯ: ೨೦ ನಿಮಿಷಗಳು

**ಅ) ಕೊಟ್ಟಿರುವ ಪ್ರತಿಯಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿ ಉತ್ತರವನ್ನು ಆರಿಸಿ ಬರೆಯಿರಿ.**

**೨X೧=೦೨**

೧.'ಹೆಸರಾಗಿದೆ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಅ) ಲೋಪಸಂಧಿ ಬ) ಆಗಮ ಸಂಧಿ ಕ) ಆದೇಶ ಸಂಧಿ ಡ) ಗುಣ ಸಂಧಿ

---------------------------------------------------------------------------

೨. ಅನರ್ಘ್ಯ – ಪದದ ಅರ್ಥವಿದು.

ಅ) ಅಗ್ಗ ಬ) ಶ್ರೇಷ್ಠ ಕ) ಸಾರಥಿ ಡ) ಉತ್ತಮ

---------------------------------------------------------------------------

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೨X೧=೦೨**

೩. ಗಂಗರ ಮೊದಲ ರಾಜಧಾನಿ ಯಾವುದು ?

---------------------------------------------------------------------------

---------------------------------------------------------------------------

೪. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು ?

---------------------------------------------------------------------------

---------------------------------------------------------------------------

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರಿಸಿ. ೨X೨=೦೪**

೫. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವವು ?

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

೬. ಚಾವುಂಡರಾಯ ಯಾರು ? ಆತನ ವಿಶೇಷತೆಯೇನು ?

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

೭. ಹಿರೇಮಲ್ಲೂರು ಈಶ್ವರನ್ ಅವರ ಕಾಲ, ಸ್ಥಳ, ಕೃತಿಗಳು ಹಾಗೂ ಪ್ರಶಸ್ತಿ ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ . ೦೨

---------------------------------------------------------------------------

---------------------------------------------------------------------------

---------------------------------------------------------------------------

**ಪದ್ಯಪಾಠ – ೬ ಗೆಳೆತನ**

**– ಚೆನ್ನವೀರ ಕಣವಿ.**



**ಕವಿ ಪರಿಚಯ**

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಚೆನ್ನವೀರ ಕಣವಿಯವರ ಕಾಲ **ಸಾ.ಶ ೧೯೨೮ ಗದಗ ಜಿಲ್ಲೆಯ ಹೊಂಬಳದವರು.** **ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ದೀಪದಾರಿ** ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ ಇವರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ,೧೯೮೧ ರಲ್ಲಿ ಜೀವ ಧ್ವನಿ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ ೧೯೯೬ರಲ್ಲಿ ಹಾಸನದಲ್ಲಿ ೬೫ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಅಭ್ಯಾಸ**

**ಹಂತ – ೧**

| | |
|---|---|
| ಕವಿ /ಸಾಹಿತಿಗಳ ಹೆಸರು | |
| ಸ್ಥಳ– ಕಾಲ | |
| ಕೃತಿಗಳು | |
| ಬಿರುದು /ಪ್ರಶಸ್ತಿಗಳು | |

ಹಂತ – ೨

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ----------------------------------
ಯವರು----------------------------------------------------------------- ದಲ್ಲಿ ಸಾ.ಶ
----------ರಲ್ಲಿ ಜನಿಸಿದರು. ಇವರು -------------------
------------------------------------------------------- ಮುಂತಾದ ಕೃತಿಗಳನ್ನು ಬರೆದಿದ್ದಾರೆ ಇವರಿಗೆ
-------------------------------------------------------
------------------------------------------------------------- ಮುಂತಾದ ಪ್ರಶಸ್ತಿಗಳು ದೊರೆತಿವೆ.

ಹಂತ : ೩

| |
|---|
| |
| |
| |
| |
| |

- **ಪದ್ಯ ಭಾಗದ ಮುಖ್ಯಾಂಶಗಳು.**

೧. ಚನ್ನವೀರ ಕಣವಿಯವರು ಗೆಳೆತನ ಅದರ ಸವಿ, ಮಹತ್ವ ಹಾಗೂ ಅನ್ಯೂನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ರಚಿತವಾದ ಕವನ ಇದಾಗಿದೆ.

೨. ಗೆಳೆತನ ಎನ್ನುವ ಒಳ್ಳೆಯ ವಿಶಾಲವಾದ ಆಲದ ಮರದ ಅಡಿಯ ತಣ್ಣನೆಯ ನೆರಳಿನ ತಂಪಿನಲ್ಲಿ ಇರುವಂತಹದು.

೩. ಗೆಳೆತನ ಎನ್ನುವುದು ಈಹಲೋಕಕ್ಕಿರುವ ಅಮೃತ ಗೆಳೆತನವನ್ನು ಬಿಟ್ಟರೆ ಜೀವನದಲ್ಲಿ ಇನ್ನೇನು ಇದೆ.

೪. ಗೆಳೆತನದಲ್ಲಿ ವಂಚನೆ ಇಲ್ಲ, ಚಂಚಲತೆ ಇಲ್ಲ, ಮೇಲು –ಕೀಳು ಎಂಬ ಭೇದವಿಲ್ಲ.

೫. ಗೆಳೆತನದಲ್ಲಿ ಮನಸ್ಸು ಬಾನಿನಷ್ಟು ಅಗಲ ಎದೆಯು ತಿಳಿಯಾದ ಕೊಳದಂತೆ ಇರುತ್ತದೆ.

೬. ಗೆಳೆತನ ಮಾಡಿದವನಿಗೆ ಮಾತ್ರ ಅದರ ಮಹತ್ವ ತಿಳಿಯುತ್ತದೆ .ಉಂಡವನೇ ಬಲ್ಲ ಅದರ ಸವಿಯನು.

೭. ಗೆಳೆತನದಲ್ಲಿ ಸರಸ ವಿರಸವನ್ನೆಲ್ಲ ಒಪ್ಪಿಕೊಂಡು ಗೆಳೆಯರಿಬ್ಬರು ಬದುಕುತ್ತಾರೆ.

೮. ಗೆಳೆತನದಲ್ಲಿ ತಮ್ಮ ಜೀವನವನ್ನು ಗಂಧದಂತೆ ತೇಯ್ದು ಒಬ್ಬರಿಗೊಬ್ಬರು ಸಹಾಯಕರಾಗಿ ಬಾಳುತ್ತಾರೆ.

**ಅಭ್ಯಾಸ ಹಾಳೆ**

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ**

**ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಕವಿ ಎಲ್ಲಿ ತಂಗಿದ್ದಾರೆ ?

ಉತ್ತರ:– ಕವಿ ಗೆಳೆತನವೆಂಬ ಸುವಿಶಾಲ ಆಲದ ಮರದಡಿಯ ತಂಪಾದ ನೆರಳಿನಲ್ಲಿ ತಂಗಿದ್ದಾರೆ.

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ ?

ಉತ್ತರ:– ಕವಿ ಮೌನದಲ್ಲಿ ಜೀವನದ ಬಹಳಷ್ಟು ತಾಳಲಾಗದ ಕಷ್ಟಗಳನ್ನು ನೋವುಗಳನ್ನು ತಾಪಗಳನ್ನು ನುಂಗಿದ್ದಾರೆ.

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ ?

ಉತ್ತರ:– ಗೆಳೆತನದ ಮನಸ್ಸಿನ ಭಾವನೆಯು ಬಾನಿನಷ್ಟು ಅಗಲವಾಗಿ, ಕೊಳದಷ್ಟು ತಿಳಿಯಾಗಿ, ಸ್ಪಟಿಕದಂತೆ ಭಾವ ಶುದ್ಧವಾಗಿದೆ.

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು ?

ಉತ್ತರ:– ಉಪ್ಪು ಮತ್ತು ತಾಯಿಯ ಬಗೆಗೆ ಗಾದೆ ಯಾವುದೆಂದರೆ ಉಪ್ಪಿಗಿಂತಲು ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ.

------------------------------------------------------------------------------------------------

------------------------------------------------------------------------------------------------

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ ?

ಉತ್ತರ:– ಗೆಳೆತನದಲ್ಲಿ ವಂಚನೆ ಇಲ್ಲ ಚಂಚಲತೆ ಇಲ್ಲ ಗೆಳೆತನದಲ್ಲಿ ಮೇಲು–ಕೀಳು ಎಂಬ ಭೇದವಿಲ್ಲ ಗೆಳೆತನದಲ್ಲಿ ನಾನು ಶ್ರೇಷ್ಠ ಎನ್ನುವ ಅಹಂಕಾರದ ಕಾರಣವಿಲ್ಲ ದ್ವೇಷದ ಗುಣಗಳಿಲ್ಲ ಸಣ್ಣತನ ಸಂಕೋಚ ಮೊದಲೇ ಇರುವುದಿಲ್ಲ.

| |
|---|
| |
| |
| |

**೨. ಗೆಳೆತನದ ಶುಚಿ–ರುಚಿ ಎಂಥದ್ದು?**

ಉತ್ತರ:– ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧುವಿಲ್ಲ ಎಂಬ ಗಾದೆಯ ನುಡಿ ಕೇಳಿರುವೆನು ಗೆಳೆತನದ ಶುಚಿ–ರುಚಿಯು ಗೆಳೆತನಕ್ಕಿಂತ ಮಿಗಿಲಾಗಿದೆ. ಕಂಡ ಕಂಡವರೇನು ಗೆಳೆತನದ ಬಗ್ಗೆ ಬಲ್ಲವನು ಗೆಳೆತನದ ರುಚಿ. ಅದನ್ನು ಉಂಡವನು ಮಾತ್ರ ಅರಿತಿರುವನು.

| |
|---|
| |
| |
| |

- **ಸಂದರ್ಭದಲ್ಲಿ ಹೇಳಿಕೆಗಳು :**

**ಆಯ್ಕೆ :** ಈ ವಾಕ್ಯವನ್ನು **ಚೆನ್ನವೀರ ಕಣವಿ** ಅವರು ರಚಿಸಿರುವ **ಆಕಾಶಬುಟ್ಟಿ** ಕವನ ಸಂಕಲನದಿಂದ ಆಯ್ದ **ಗೆಳೆತನ** ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

**ಈ ಕೆಳಗಿನ ಮಾದರಿಯಲ್ಲಿ ಸಂದರ್ಭಗಳನ್ನು ಬರೆಯಿಸಿ ರೂಢಿಸುವುದು.**

ಆಯ್ಕೆ : ಈ ವಾಕ್ಯವನ್ನು---------------ಅವರು ರಚಿಸಿರುವ--------- ಕವನ ಸಂಕಲನದಿಂದ ಆಯ್ದ ------------ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ ಈ ಮಾತನ್ನು ಯಾರು ಯಾರಿಗೆ ಯಾವಾಗ ಹೇಗೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.

**ಸ್ವಾರಸ್ಯ ಈ ಮಾತಿನ ವಿಶೇಷತೆಯನ್ನು /ಮೌಲ್ಯವನ್ನು/ ಗುಣವನ್ನು ಕುರಿತು ಬರೆಯಬೇಕು.**

**ಕಂಠಪಾಠ**

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆ ನುಡಿ ಕೇಳಿರುವೆನು
ಗೆಳೆತನದ ಶುಚಿರುಚಿಯು ಇದಕೂ ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

**ಪದ್ಯವನ್ನು ನೋಡಿ ಬರೆಯಲು ತಿಳಿಸಿ ರೂಢಿಗಳಿಸುವುದು – ೧**

| | |
|---|---|
| ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು. | ಇಲ್ಲೆಂಬ ಗಾದೆ ನುಡಿ ಕೇಳಿರುವೆನು. |
| ----------------------------------. | ---------------------------- |
| ----------------------------------. | ---------------------------- |
| ----------------------------------. | --------------------------- |
| ಗೆಳೆತನದ ಶುಚಿರುಚಿ ಇದಕೂ ಮಿಗಿಲಾಗಿಹುದು. | ಎಂಬ ಸಾಹಸ ಮಾಡೇ ದೋಷವೇನು ? |
| ----------------------------------. | ---------------------------- |
| ---------------------------------- | --------------------------- |
| ----------------------------------. | --------------------------- |
| ಕಂಡ ಕಂಡವರೇನು ಬಲ್ಲರಿದನು. | ಉಂಡವನು ಕಂಡೆನು ಇದರ ಹದನು |
| -------------------------------- | ------------------------------- |
| --------------------------------. | ------------------------------- |
| --------------------------------. | ------------------------------- |

**ಅಭ್ಯಾಸ : ಸುಳಿವು ನೀಡಿ ಬರೆಯಿಸುವುದು –**

**ಮಾದರಿ –೨ ,೩ ಒಂದೊಂದು ಸಾಲನ್ನು ಬರೆದು ರೂಡಿಗೊಳಿಸಿಕೊಳ್ಳಿ**

| | |
|---|---|
| ಉಪ್ಪಿಗಿಂತಲು. --------------------- | ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು |
| ಇಲ್ಲೆಂಬ ------------------------- | --------------------------------------- |
| ಗೆಳೆತನದ. ----------------------- | ಗೆಳೆತನದ ಶುಚಿ ರುಚಿಯು ಇದಕೂ ಮಿಗಿಲಾಗಿಹುದು |
| ಎಂಬ. --------------------------- | --------------------------------------- |
| ಕಂಡ -------------------------- | ಕಂಡ ಕಂಡವರೇನು ಬಲ್ಲರಿದನು |
| ಉಂಡವನ-----------------------. | ------------------------------------- |

**ಮಾದರಿ – ೪,೫ ಬಿಟ್ಟಿರುವ ಮುಂದಿನ ಸಾಲನ್ನು ಬರೆಯಿರಿ.**

| | |
|---|---|
| ಉಪ್ಪಿಗಿಂತಲು. ------------------------------------ | ಉಪ್ಪಿಗಿಂತಲು---------- |
| ---------------------------------- ಕೇಳಿರುವೆನು | ---------------------- |
| ಗೆಳೆತನದ ------------------------------------. | ----------------------- |
| ----------------------------- ದೋಷವೇನು? | ----------------------- |
| ಕಂಡ ---------------------------------------. | --------------ಹದನು |
| ------------------------- ಹದನನ. . | |

.

ಮಾದರಿ – ೦೬ ಪೂರ್ಣ ಪದ್ಯ ನೆನಪಿಸಿಕೊಂಡು ಬರೆಯಿರಿ.

| |
|---|
| |
| |
| |
| |

****

## ಪದ್ಯಪಾಠ ೬– ಗೆಳೆತನ

## ಘಟಕ ಪರೀಕ್ಷೆ

ಅಂಕಗಳು : ೧೦ ಸಮಯ : ೨೦ ನಿಮಿಷ.

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿ** **೨ x ೧ = ೨**

೧) ಕವಿ ಎಲ್ಲಿ ತಂಗಿದ್ದಾರೆ ?

-------------------------------------------------------------------------

೨) ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು ?

-------------------------------------------------------------------------

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ** **೨ x ೨ = ೪**

೩) ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ ?

-------------------------------------------------------------------------------------

-------------------------------------------------------------------------------------

-------------------------------------------------------------------------------------

-------------------------------------------------------------------------------------

-------------------------------------------------------------------------------------

೪) ಗೆಳೆತನದ ಸೂಚಿರುಚಿ ಎಂಥದ್ದು?

-------------------------------------------------------------------------------------

-------------------------------------------------------------------------------------

-------------------------------------------------------------------------------------

-------------------------------------------------------------------------------------

-------------------------------------------------------------------------------------

**ಇ) ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಪೂರ್ಣಗೊಳಿಸಿ** **೧ x ೪ = ೪**

೪) ಉಪ್ಪಿಗಿಂತಲು--------------------------

--------------------------------------

--------------------------------------

----------------------------ಇದರ ಹದನು.

*****



## ಪಠ್ಯ ಪೂರಕ ಅಧ್ಯಯನ–೫

## ಆಟೋರಿಕ್ಷಾದ ರಸಪ್ರಸಂಗಗಳು

### – ಎಚ್. ನರಸಿಂಹಯ್ಯ

೧. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು?

ಉತ್ತರ: ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಎಂಬುದು ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವಾಗಿದೆ.

೨. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು?

ಉತ್ತರ: ಕೈಕಾಲು ಮುರಿದುಕೊಂಡು ಮೂಳೆ ವೈದ್ಯರ ಕೈಗೆ ಸಿಕ್ಕಿ ದೇಹದಲ್ಲಿ ನಟ್ಟೂ, ಬೋಲ್ಟೂ ಹಾಕಿಸಿಕೊಂಡು ಬದುಕುವುದಕ್ಕಿಂತ ಅಲ್ಲಿಯೇ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು ಎಂದು ನನ್ನ ಅಭಿಪ್ರಾಯ.

೩. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದ?

ಉತ್ತರ: "ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಂಥವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೇನೆ ಅಪಶಕುನ" ಎಂದು ಸಿಡುಕಿ ಗಾಡಿ ಸ್ಟಾರ್ಟ್ ಮಾಡಿದ ಚಾಲಕ.

೪. ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲವೇಕೆ?

ಉತ್ತರ: "ಇಲ್ಲಪ್ಪ, ನನಗೇನೂ ಅಲ್ಲಿ ಭಯವಾಗುವುದಿಲ್ಲ. ಯಾಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು. ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್‌ಟೇಕ್ ಮಾಡಿದ ಪ್ರಸಂಗವೂ ಇಲ್ಲ" ಅದಕ್ಕಾಗಿ ಲೇಖಕರಿಗೆ ವಿಮಾನಯಾನದ ಬಗ್ಗೆ ಭಯವಿರಲಿಲ್ಲ.

೫. ಪ್ರಾರ್ಥನೆಯಿಂದ ಮಳೆಬರಿಸುವುದಾಗಿ ಹೇಳಿದ್ದವನಾರು?

ಉತ್ತರ: ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದ್ದವರು ಬಾಲಯೋಗಿ.

೬. ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗದ ಬಗ್ಗೆ ತಿಳಿಸಿ.

ಉತ್ತರ: ಒಂದು ಸಂಜೆ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಒಂದು ಕಾರ್ಯಕ್ರಮವಿತ್ತು. ಅದು ಮುಗಿಯುವುದು ರಾತ್ರಿ ೧೦ ಘಂಟೆಯಾಯಿತು. ಆಟೋಗಾಗಿ ಕಾಲೇಜಿನ ಹತ್ತಿರ ಅಲ್ಲಿಯ ಕೆಲವು ಉಪಾಧ್ಯಾಯರೊಂದಿಗೆ ಕಾದು ನಿಂತಿದ್ದೆ. "ಇಷ್ಟು

ಹೊತ್ತಿನಲ್ಲಿ ಹಾಸ್ಟೆಲನಲ್ಲಿ ಊಟ ಇರುವುದಿಲ್ಲ; ಆದುದರಿಂದ ನಮ್ಮ ಮನೆಗೆ ಬಂದು ಊಟಮಾಡಿಕೊಂಡು ಹೋಗಿ" ಎಂದು ಒಬ್ಬಿಬ್ಬ ಉಪಾಧ್ಯಾಯರು ಒತ್ತಾಯಪಡಿಸುತ್ತಿದ್ದರು. "ಪರವಾಗಿಲ್ಲ, ಒಂದು ಹೊತ್ತು ಊಟ ಇಲ್ಲದೇ ಇದ್ದರೆ ಚಿಂತೆ ಇಲ್ಲ. ತುಂಬಾ ಹೊತ್ತಾಗಿದೆ" ಎಂದು ಹೇಳಿ ಅಲ್ಲಿಂದ ಹೊರಟೆ. ಆಟೋ ಚಾಲಕರು ಸ್ವಲ್ಪ ವಯಸ್ಸಾದವರು. ಇದೆನ್ನೆಲ್ಲಾ ಸಾವಧಾನವಾಗಿ ಕೇಳುತ್ತಿದ್ದರು. 'ಯಾಕೆ ಸಾರ್, ನಿಮಗೆ ಮನೆ ಇಲ್ಲವೇ? ಊಟ ಇಲ್ಲದೇ ಇದ್ದರೂ ಪರವಾಗಿಲ್ಲ ಅಂತ ಹೇಳುತ್ತಿದ್ದೀರಿ" ಎಂದು ಕೇಳಿದರು. "ಇಲ್ಲಪ್ಪ, ನನಗೆ ಮನೆ–ಗಿನೆ ಇಲ್ಲ ನ್ಯಾಷನಲ್ ಕಾಲೇಜ್ ಹಾಸ್ಟೆಲಿನಲ್ಲಿದ್ದೇನೆ" ಅಂದೆ. "ಇಷ್ಟು ಹೊತ್ತಿನಲ್ಲಿ ಉಪವಾಸ ಮಲಗಿಕೊಳ್ಳಬಾರದು ಸಾರ್. ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್ ಸರ್ಕಲ್ ಗೆ ಹೋಗೋಣ ಬನ್ನಿ. ಅಲ್ಲಿ ಇಡ್ಲಿ ಮಾರುತ್ತಾರೆ. ನೀವು ಇಡ್ಲಿ ತಿನ್ನುವ ತನಕ ಕಾಯುತ್ತೇನೆ" ಎಂದು ತುಂಬಾ ಆತ್ಮೀಯವಾಗಿ ವಿನಂತಿಸಿಕೊಂಡ. "ತುಂಬಾ ಥ್ಯಾಂಕ್ಸ್, ನಿಮ್ಮಂತಹವರು ಬಹಳ ಅಪರೂಪ. ಆಟೋದವರಿಗೆ ಮಾನವೀಯತೆ ಇಲ್ಲ ಎಂದು ಹೇಳುತ್ತಾರೆ. ಅದಕ್ಕೆ ನೀವು ಅಪವಾದ" ಲೇಖಕರು ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗವಾಗಿದೆ.

****

# ಗದ್ಯ ಪಾಠ ೭– ಅಮ್ಮ

**–ಡಾ॥ ಯು. ಆರ್. ಅನಂತಮೂರ್ತಿ**



- **ಕೃತಿಕಾರರ ಪರಿಚಯ**

ಕನ್ನಡದ ಪ್ರಸಿದ್ಧ ಲೇಖಕರಾದ ಡಾಕ್ಟರ್ **ಯು. ಆರ್. ಅನಂತಮೂರ್ತಿ** ಅವರು **ಸಾ.ಶ.೧೯೩೨** ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ **ಮೇಳಿಗೆ** ಗ್ರಾಮದಲ್ಲಿ  ಜನಿಸಿದರು. ಇವರು **ಸಂಸ್ಕಾರ, ಭವ, ಅವಸ್ಥೆ, ಭಾರತೀಪುರ, ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ  ಭಾರತ ಸರ್ಕಾರದ ಪದ್ಮಭೂಷಣ **ಭಾರತೀಯ ಜ್ಞಾನಪೀಠ ಪ್ರಶಸ್ತಿ** ನೀಡಿ ಗೌರವಿಸಲಾಗಿದೆ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |

| |
|---|
| |
| |
| |

- **ಪಾಠದ ಪ್ರಮುಖ ಅಂಶಗಳು**

೧. ಲೇಖಕರ ಊರಿನಲ್ಲಿ ಹುಲಿಗಳ ಕಾಟ ಬಹಳ ಇತ್ತು.

೨. ಲೇಖಕರಿಗೆ ಭಯವಾದಾಗ ಅರ್ಜುನ ಮಂತ್ರ ಹೇಳುತ್ತಿದ್ದರು.

೩. ಲೇಖಕರ ಮೊದಲ ವಿದ್ಯಾ ಗುರು ಅವರ ಅಮ್ಮ.

೪. ಲೇಖಕರಿಗೆ ಅಕ್ಷರಭ್ಯಾಸವಾಗಿದ್ದು ಕೆರೆ ಕೊಪ್ಪದ ಮನೆಯಲ್ಲಿ.

೫. ಲೇಖಕರ ಮೊದಲ ಅಧಿಕೃತ ಗುರುಗಳು ಕೃಷ್ಣಪ್ಪಯ್ಯನವರು.

೬. ಮಣ್ಣಿನ ದೋಣಿನಲ್ಲಿ ದುಂಡಗಿನ ಸಣ್ಣ ಸಣ್ಣ ಕುಳಿಗಳ ಒಳಗೆ ಇರುವ ಒಂದು ಕಪ್ಪು ಹುಳು ಇರುತ್ತಿತ್ತು ಅದನ್ನು ತನ್ನಾದೇವಿ ಗುಬ್ಬಿ ಎಂದೆಲ್ಲ ಕರೀಯುತ್ತಿದ್ದರು.

೭. ಮಳೆಗಾಲದ ಆರಂಭಕ್ಕೆ ಮೊದಲು ಮನೆಯ ಕೆಲಸಕ್ಕೆ ನಮ್ಮ ಸಂಬಂಧಿಕರು ನೆರವಾಗುತ್ತಿದ್ದರು ಒಣಸೌದೆ ಅಕ್ಕಿ ,ಬೇಳೆ, ಜೋನಿ ಬೆಲ್ಲ ಸಂಗ್ರಹಿಸುತ್ತಿದ್ದರು.

೮. ನಸುಕಿನಲ್ಲಿ ಎದ್ದು ಮನೆಯದು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರ ಒಂದರಿಂದ ನೆಲದ ಮೇಲೆ ಚೆಲ್ಲುತ್ತಿದ್ದ ನಕ್ಷತ್ರ ಆಕಾರದ ರಂಜದ ಹೂಗಳನ್ನು ಆರಿಸುವುದು ಲೇಖಕರಿಗೆ ಖುಷಿ ಕೊಡುವ ಸಂಗತಿಗಳಾಗಿದ್ದವು.

೯. ಕೃಷ್ಣಪ್ಪಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತಾ ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತಾ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

೧೦.ವಿಶೇಷ ಪದಾರ್ಥಗಳೆಲ್ಲವನ್ನು ಕಡವಾಗಿ ಪಡೆಯುವುದು ವರ್ಷಕ್ಕೊಮ್ಮೆ ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ ,ಯುಗಾದಿಯಿಂದ ಇನ್ನೊಂದು ಯುಗಾದಿಗೆ ,ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬಕ್ಕೆ, ಈ ಕಡದ ಅವಧಿಯಾಗಿತ್ತು ಅದನ್ನು ಬೆಳೆದ ಅಡಿಕೆಯನ್ನು ಭತ್ತವನ್ನು ಬದಲಿಗೆ ಕೊಟ್ಟು ಕಡವನ್ನು ತೀರಿಸುವುದು.

**ಅಭ್ಯಾಸದ ಹಾಳೆ:**

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

| |
|---|
| |
| |
| |
| |
| |
| |
| |
| |

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು.**

**೧. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು?**

**ಉತ್ತರ:** ಬಾಲ್ಯದಲ್ಲಿ ಲೇಖಕರು ಭಯವಾದಾಗ ಅರ್ಜುನ ಫಲ್ಗುಣ ಪಾರ್ಥ ಕಿರೀಟಿ ಶ್ವೇತ ವಾಹನ. ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು.

| |
|---|
| |

**೨. ಲೇಖಕರ ಮೊದಲ ವಿದ್ಯಾ ಗುರು ಯಾರು?**

**ಉತ್ತರ:** ಲೇಖಕರ ಮೊದಲ ವಿದ್ಯಾ ಗುರು ಅವರ ಅಮ್ಮ.

| |
|---|
| |

**೩. ಸಣ್ಣ ಕುಳಿಯೊಳಗಿನ ಕಪ್ಪು ಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?**

**ಉತ್ತರ:** ಸಣ್ಣ ಕುಳಿಯೊಳಗಿನ ಕಪ್ಪು ಹುಳುವನ್ನು ತನ್ನಾದೇವಿ ಹೆಸರಿನಿಂದ ಕರೆಯುತ್ತಾರೆ.

| |
|---|
| |

**೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?**

**ಉತ್ತರ:** ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತಾ ಕೃಷ್ಣಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತಾ ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ ಎಂದು ಮನಸ್ಸಿನಲ್ಲಿ ಪ್ರಾರ್ಥಿಸುತ್ತಾ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

| |
|---|
| |
| |
| |

**೫. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದುಕೊಡುತ್ತಿದ್ದರು ಯಾರು?**

**ಉತ್ತರ:** ಬ್ಯಾರಿಯೊಬ್ಬರು ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದರು.

| |
|---|

- **ಈ ಗದ್ಯಭಾಗದಲ್ಲಿ ಬಂದಿರುವ ಸಂದರ್ಬಿಕ ಹೇಳಿಕೆಗಳು**

**ಆಯ್ಕೆ:** ಈ ವಾಕ್ಯವನ್ನು ಡಾ॥ ಯು.ಆರ್ ಅನಂತಮೂರ್ತಿ ಅವರು ರಚಿಸಿದ ಸುರಗಿ ಎಂಬ ಆತ್ಮಕಥನದಿಂದ ಆಯ್ದ ಅಮ್ಮ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

| **ಗದ್ಯ** | **ಸಾಂದರ್ಭಿಕ ಪ್ರಶ್ನೆಗಳು** | **ಯಾರು ?ಯಾರಿಗೆ?** | **ಸಂದರ್ಭ** |
|---|---|---|---|
| ಅಮ್ಮ | "ಸರಸ್ವತಿ ನಮಸ್ತುಭ್ಯಂ ವರದೇ ಕಾಮರೋಪಿಣಿ." | ಲೇಖಕರ ಅಮ್ಮ ಲೇಖಕರಿಗೆ | ನೆಲದ ಮರಳಿನಲ್ಲಿ ಲೇಖಕರಿಗೆ ಅಕ್ಷರ ಅಭ್ಯಾಸ ಮಾಡುವಾಗ |

| | | | |
|---|---|---|---|
| | "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು." | ಲೇಖಕರು ಓದುಗರಿಗೆ | ತಮ್ಮ ಬಾಲ್ಯದ ದಿನಗಳನ್ನು ಹೇಳುವಾಗ ಅಮ್ಮ ಮಗಳಂತೆ ತನ್ನನ್ನು ಪ್ರೀತಿಸುತಿದ್ದಿದ್ದು |
| | "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ" | ಲೇಖಕರು ತಮಗೆ ತಾವೇ | ಕೃಷ್ಣಯ್ಯ ಮೇಷ್ಟ್ರಿಗಾಗಿ ಕಾಯುತ್ತಾ ಕುಳಿತಾಗ |
| | "ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು" | ಲೇಖಕರು ಓದುಗರಿಗೆ | ಚರಟದ ಕಾಫಿಯ ವಿವರಣೆ ನೀಡುವಾಗ |
| | "ನನಗೆ ಚರಟದಲ್ಲಿ ಕಾಫಿಯೋ" | ಲೇಖಕರ ಅಜ್ಜ ಲೇಖಕರ ಅಮ್ಮನಿಗೆ | ಚರಟದಲ್ಲಿ ಕಾಫಿಯನ್ನು ಕೊಟ್ಟಾಗ ಕೋಪದಿಂದ ಹೇಳಿದ ಮಾತು |

**ಈ ಕೆಳಗಿನ ಮಾದರಿಯಲ್ಲಿ ಎಲ್ಲಾ ಸಂದರ್ಭಗಳನ್ನು ಗೃಹ ಕಾರ್ಯ ಪುಸ್ತಕದಲ್ಲಿ ಬೆರೆಸಿ ರೂಢಿಸುವುದು.**

**ಆಯ್ಕೆ:** ಈ ವಾಕ್ಯವನ್ನು. ಅವರು ಬರೆದ. ಕೃತಿ ಯಿಂದ ಆಯ್ದ. ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ:** ಈ ಮಾತನ್ನು ಯಾರು? ಯಾರಿಗೆ? ಯಾವಾಗ? ಏಕೆ ಹೇಳಿದರೂ ಎಂಬ ಅಂಶಗಳನ್ನು ಬರೆಯಬೇಕು.

**ಸ್ವಾರಸ್ಯ:** ಈ ಮಾತಿನ ವಿಶೇಷತೆಯನ್ನ /ಮೌಲ್ಯವನ್ನು/ ಗುಣವನ್ನು ಕುರಿತು ಬರೆಯಬೇಕು.

**ಮಾದರಿ ಸಂದರ್ಭ ವಿವರಣೆ**

**"ಸರಸ್ವತಿ ನಮಸ್ತುಭ್ಯಂ ವರದೇ ಕಾಮ ರೂಪಿಣಿ"**

**ಆಯ್ಕೆ:** ಈ ವಾಕ್ಯವನ್ನು ಡಾಕ್ಟರ್ ಯು ಆರ್ ಅನಂತಮೂರ್ತಿಯವರು ಬರೆದಿರುವ ಸುರಗಿ ಎಂಬ ಆತ್ಮಕಥನದಿಂದ ಆಯ್ದುಕೊಂಡ ಅಮ್ಮ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲೇಖಕರಿಗೆ ಅಕ್ಷರ ಅಭ್ಯಾಸವನ್ನು ಮಾಡುವಾಗ ಅವರ ಅಮ್ಮ ಹೇಳಿದ್ದ ಮಂತ್ರ.

**ಸ್ವಾರಸ್ಯ:** ಲೇಖಕರ ತಾಯಿ ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಸರಸ್ವತಿ ದೇವಿಗೆ ವಂದಿಸುವ ಮೂಲಕ ಪ್ರಾರಂಭಿಸಿರುವುದು ಇಲ್ಲಿನ ಸ್ವಾರಸ್ಯ.

- **ಗದ್ಯಭಾಗದ ವ್ಯಾಕರಣ ಅಂಶಗಳು**

**ವಾಕ್ಯದ ಪ್ರಭೇದಗಳು:**

| | |
|---|---|
| ಸಾಮಾನ್ಯ ವಾಕ್ಯ | ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರವಾಗಿರುವ ವಾಕ್ಯಗಳು ಸಾಮಾನ್ಯ ವಾಕ್ಯಗಳು<br>ಉದಾಹರಣೆ: ಕುವೆಂಪು ಅವರು ಶ್ರೀ ರಾಮಾಯಣ ದರ್ಶನ ಮಹಾಕಾವ್ಯವನ್ನು ಬರೆದಿದ್ದಾರೆ. |

| | |
|---|---|
| ಸಂಯೋಜಿತ ವಾಕ್ಯ | ಸ್ವತಂತ್ರವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ<br>ಉದಾಹರಣೆಗೆ: ಪಾಂಡವರ ಯಜ್ಞತ್ರದ ಮಣಿಪುರವನ್ನು ಪ್ರವೇಶಿಸಿತು ಆಗ ಬಬ್ರುವಾಹನನ್ನು ಅದನ್ನು ಕಟ್ಟಿ ಹಾಕಿದನು ಆದ್ದರಿಂದ ಬಬ್ರುವಾಹನ ನಿಗೂ ಅರ್ಜುನನಿಗೆ ಯುದ್ಧ ನಡೆಯಿತು. |
| ಮಿಶ್ರವಾಕ್ಯ | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ.<br>ಉದಾಹರಣೆ: ಸೀತಾ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾಧ್ಯವಾಗದಿದ್ದಾಗ ಆಕೆ ತುಂಬಾ ನೊಂದುಕೊಂಡಳು. |

**ಸಮಾಸಗಳ ಪರಿಚಯ**

| |
|---|
| ತತ್ಪುರುಷ ಸಮಾಸ<br>ಕರ್ಮಧಾರೆಯ ಸಮಾಸ<br>ದ್ವಿಗು ಸಮಾಸ<br>ಅಂಶಿ ಸಮಾಸ<br>ದ್ವಂದ್ವ ಸಮಾಸ<br>ಬಹುರ್ವಿಹಿ ಸಮಾಸ<br>ಕ್ರಿಯಾ ಸಮಾಸ<br>ಗಮಕ ಸಮಾಸ |

*****

## ಗದ್ಯ ಪಾಠ ೭– ಅಮ್ಮ

### ಘಟಕ ಪರೀಕ್ಷೆ

ಅಂಕಗಳು :೧೦          ಸಮಯ: ೨೦ ನಿಮಿಷಗಳು.

---

**ಅ) ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

**೨X ೧=೦೨**

೧. ಹಿರಿಯ : ಹಿರಿಯರು :: ಅಮ್ಮ : ----------------------

೨. ಕಾಲದಲ್ಲಿ : ಸಪ್ತಮಿ ವಿಭಕ್ತಿ :: ಸಕ್ಕರೆಯಿಂದ : ------------------------

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೨X ೧=೦೨**

೩. ಲೇಖಕರ ಮೊದಲ ವಿದ್ಯಾ ಗುರು ಯಾರು ?

------------------------------------------------------------

------------------------------------------------------------

೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು ?

------------------------------------------------------------

------------------------------------------------------------

**ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರಿಸಿ.** **೨X೨=೦೪**

೫. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ ?

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

೬. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು ?

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

೭. ಯು.ಆರ್.ಅನಂತಮೂರ್ತಿಯವರ ಕಾಲ, ಸ್ಥಳ, ಕೃತಿಗಳು ಹಾಗೂ ಪ್ರಶಸ್ತಿ ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ?

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

## ಪದ್ಯ –೭ . ವಚನಾಮೃತ

–ಅಲ್‌ಲಮಪ್ರಭು



**ಕೃತಿಕಾರರ ಪರಿಚಯ:**

ಅಲ್ಲಮಪ್ರಭು:– ೧೨ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರ ಈತನು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವಿಯಲ್ಲಿ ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಈತ ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ **'ಶೂನ್ಯ ಪೀಠದ'** ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವನು. ಅವನು ಒಬ್ಬ ಅನುಭಾವಿ ಸತ್ಯ ಶೋಧನೆಯೇ ಅವನ ಜೀವನದ ಪರಮ ಗುರಿಯಾಗಿತ್ತು. ಅವನ ವಚನಗಳು ಬೆರಗು ಮತ್ತು ಬೆಡಗಿನಿಂದ ಕೂಡಿವೆ. **'ಗುಹೇಶ್ವರ'** ಎಂಬುದು ಈತನ ವಚನಗಳ ಅಂಕಿತ.

**ಚಟುವಟಿಕೆ–೧**

- **ಪ್ರಮುಖ ಅಂಶಗಳನ್ನು ಗುರುತಿಸುವುದು.**

| | |
|---|---|
| **ಕವಿ/ ಸಾಹಿತಿಗಳ ಹೆಸರು** | |
| **ಸ್ಥಳ– ಕಾಲ** | |
| **ಕೃತಿಗಳು** | |
| **ಬಿರುದು/ ಪ್ರಶಸ್ತಿಗಳು** | |

- **ಬರೆಯುವ ವಿಧಾನವನ್ನು ಅಭ್ಯಾಸ ಮಾಡಿಸುವುದು.**

| |
|---|
| ಅವರು |
| ಗ್ರಾಮದಲ್ಲಿ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪುರಸ್ಕಾರಗಳು ಸಂದಿವೆ. |

- **ಸ್ವತಂತ್ರವಾಗಿ ಬರೆಯಿಸುವುದು.**

| |
|---|
| |
| |
| |

| |
|---|
| |
| |
| |

- <u>**ಪದ್ಯ ಭಾಗದ ಪ್ರಮುಖಾಂಶಗಳು**</u>

  ೧. ಕೃತಯುಗದಲ್ಲಿ ಶ್ರೀ ಗುರು ಶಿಷ್ಯನಿಗೆ ಬಡಿದು ಬುದ್ಧಿ ಹೇಳುತ್ತಾನೆ.

  ೨. ತ್ರೇತಾಯುಗದಲ್ಲಿ ಶ್ರೀ ಗುರು ಶಿಷ್ಯನಿಗೆ ಬೈದು ಬುದ್ಧಿ ಕಲಿಸುತ್ತಾನೆ.

  ೩. ದ್ವಾಪರಯುಗದಲ್ಲಿ ಶ್ರೀ ಗುರು ಶಿಷ್ಯನಿಗೆ ಗದರಿಸಿ ಬುದ್ಧಿ ಕಲಿಸುತ್ತಾನೆ.

  ೪. ಆದರೆ ಕಲಿಯುಗದಲ್ಲಿ ಶ್ರೀ ಗುರು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಕಲಿಸುತ್ತಾನೆ.

  ೫. ಪರಿವರ್ತನೆ ಜಗದ ನಿಯಮ.

  ೬. ಕಾಲಗತಿಯಲ್ಲಿ ಗುರುವಿನ ಸ್ಥಾನ ಮತ್ತು ಕಲಿಕಾ ಪ್ರವೃತ್ತಿಗಳನ್ನು ಬದಲಾಗಿರುವುದನ್ನು ಅಲ್ಲಮಪ್ರಭುಗಳು ಮಾರ್ಮಿಕವಾಗಿ ಹೇಳಿದ್ದಾರೆ.

**ಅಭ್ಯಾಸ ಹಾಳೆ**

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

| |
|---|
| |
| |
| |
| |
| |
| |
| |
| |
| |
| |
| |

*****

## ಪದ್ಯ– ೭. ವಚನಾಮೃತ



**– ಆಯ್ದಕ್ಕಿ ಮಾರಯ್ಯ**

**ಕೃತಿಕಾರರ ಪರಿಚಯ:**

**ಆಯ್ದಕ್ಕಿ ಮಾರಯ್ಯನು** ಸಾ.ಶ **೧೧೬೦ರ ಕಾಲದವನಾಗಿದ್ದು,** ಶಿವಶರಣ ಮತ್ತು ಪ್ರಸಿದ್ಧ ವಚನಕಾರ. ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದಕ್ಕಿ ಲಕ್ಕಮ್ಮನ ಪತಿ ಆಯ್ದಕ್ಕಿ ಮಾರಯ್ಯ ಎಂದೇ ಪ್ರಸಿದ್ಧಿಯಾಗಿದ್ದು, ಸುಮಾರು ೨೭ ವಚನಗಳು ದೊರೆತಿವೆ. ಎಂತಹ ಪರಿಸ್ಥಿತಿ ಎದುರಾದರೂ ಕಾಯಕವ ಬಿಡದೇ ಮಾಡಬೇಕು, ಕಾಯಕ ಮಾಡಿ ಬದುಕಬೇಕು, ಯಾಚನೆ ಮಾಡಬಾರದು ಹಾಗೂ ಕೂಡಿಡಬಾರದು ಎಂದು ಹೇಳುವ ಮೂಲಕ ಕಾಯಕ ಬದುಕಿನ ಮಹತ್ವವನ್ನು ಸಾರಿದ್ದಾರೆ. ಇಂತಹ ಆದರ್ಶವನ್ನು ಹೊಂದಿರುವ ಈತನ ಅಂಕಿತನಾಮ **ಅಮರೇಶ್ವರಲಿಂಗ.** ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವುದೇ ಅವರ ಕಾಯಕವಾಗಿತ್ತು.

**ಅಭ್ಯಾಸ ಹಂತ–೧**

| | |
|---|---|
| **ವಚನಕಾರರ ಹೆಸರು** | |
| **ಸ್ಥಳ** | |
| **ಕಾಲ** | |
| **ಅಂಕಿತನಾಮ** | |

**ಹಂತ–೨**

ಇವರೊಬ್ಬ --------------- ಶಿವಶರಣ ಮತ್ತು ------------------ ಇವರು ಸಾ.ಶ ------------ ರಲ್ಲಿ ಜನಿಸಿದರು. ಇವರ ಊರು ರಾಯಚೂರು ಜಿಲ್ಲೆಯ --------------- ಈತನ ಅಂಕಿತನಾಮ

**ಹಂತ–೩**

| |
|---|
| |
| |
| |
| |
| |
| |

<u>ಪದ್ಯ ಭಾಗದ ಪ್ರಮುಖಾಂಶಗಳು</u>

೧. ಕಾಯಕದಲ್ಲಿ ನಿರತನಾದಾಗ ಗುರು ದರ್ಶನವಾದರೂ ಮರೆಯಬೇಕು.

೨. ಲಿಂಗ ಪೂಜೆಯಾದರೂ ಮರೆಯಬೇಕು.

೩. ಜಂಗ ಮುಂದೆ ನಿಂತಿದ್ದರೂ ಹಂಗ ಅರಿಯಬೇಕು.

೪. ಕಾಯಕವೇ ಕೈಲಾಸವಾದ ಕಾರಣ ಕಾಯಕದಲ್ಲಿ ಸ್ವರ್ಗ ಕಾಣಬೇಕು.

೫. ಕಾಯಕವೂ ಗುರುಲಿಂಗ ಜಂಗಮಕ್ಕಿಂತ ಮೀರಿದ್ದು ಎಂದು ಆಯ್ದಕ್ಕಿ ಮಾರಯ್ಯ ಹೇಳಿದ್ದಾರೆ.

**ಅಭ್ಯಾಸ ಹಾಳೆ:**

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

| |
|---|
| |
| |
| |
| |
| |
| |
| |
| |
| |
| |

***

## ಪದ್ಯ ೭ ವಚನಾಮೃತ

## – ಅಮುಗೆರಾಯಮ್ಮ



**ಕೃತಿಕಾರರ ಪರಿಚಯ:**

